ರಾಯಚೂರು, ಕೊಪ್ಪಳ, ಯಾದಗಿರಿ, ಕಲಬುರ್ಗಿ, ಬಳ್ಳಾರಿ, ವಿಜಯನಗರ, ಬೀದರ, ಏಕಕಾಲಕ್ಕೆ ಪ್ರಕಟಣೆ
Raichur, Koppal, Yadagiri, Kalburgi, Ballary, Vijaya Nagar, Bidar

# ಕನ್ನಡ ಮಾತೃ ಭೂಮಿ

ಕನ್ನಡದಿನ ಪತ್ರಿಕೆ

ರಾಯಚೂರಿನಿಂದ ರಾಜ್ಯದವರೆಗೆ

KANNADA MATHRUBHOOMI
KANNADA DAILY PAPER

ಸಂಪಾದಕರು : ಶ್ಯಾಮ್ ಸುಂದರ್.ಎಲ್
EDITOR : SHYAM SUNDER L

mathrubhoomircr@gmail.com
Call : 9886635117

ಸಂಪುಟ : Volume : 03 | ಸಂಚಿಕೆ Issue : 154 | ದಿನಾಂಕ : 04-04-2026 Date : 04-04-2026 | ಶನಿವಾರ Saturday | RNI: Karkan/2023/89199 Post Reg No.: RCR/L/RNP/98/2025-2027 | ರಾಯಚೂರು Raichur | ಪುಟ : Pages : 04 | ರೂ Rs. 2

## ಎಸ್‌ಎಸ್‌ಎಲ್‌ಸಿಯಲ್ಲಿ ಹಿಂದಿ ಭಾಷೆ ಅಂಕ ಕೈಬಿಟ್ಟ ತೀರ್ಮಾನ ಮರುಪರಿಶೀಲಿಸಲು ಕೋರಿ ರಾಜ್ಯಪಾಲರ ಪತ್ರ

**ಬೆಂಗಳೂರು,ಏ.3**-ಎಸ್‌ಎಸ್‌ಎಲ್‌ಸಿಯಲ್ಲಿ ಹಿಂದಿ ಭಾಷೆಗೆ ಅಂಕ ಕೈಬಿಟ್ಟ ತೀರ್ಮಾನವನ್ನು ಮರು ಪರಿಶೀಲಿಸುವಂತೆ ಕೋರಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್‌ಗೆ ಪತ್ರ ಬರೆದಿದ್ದಾರೆ.

ಈ ಸಂಬಂಧ ರಾಜ್ಯಪಾಲರ ಕಾರ್ಯ ದರ್ಶಿ ಪತ್ರ ಬರೆದು, ಬೆಂಗಳೂರು ಸ್ಥಳೀಯ ಭಾಷೆಗಳ ಸಂರಕ್ಷಣಾ ಸಂಘವು (**Association for Preservation of Local Languages, Bengaluru**) ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೃತೀಯ ಭಾಷೆಗೆ ಅಂಕಗಳ ಬದಲಾಗಿ ಕೇವಲ ಗ್ರೇಡ್‌ಗಳನ್ನು ಮಾತ್ರ ನೀಡುವ ಇತ್ತೀಚಿನ ನಿರ್ಧಾರದ ಕುರಿತು ಕರ್ನಾಟಕ ರಾಜ್ಯಪಾಲರಿಗೆ ಸಲ್ಲಿಸಿರುವ ಮನವಿಯ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡುವಂತೆ ಕೋರಿದ್ದಾರೆ.



ವಿದ್ಯಾರ್ಥಿಗಳಲ್ಲಿ ಭಾಷಾ ವೈವಿಧ್ಯತೆ, ಜಾಗೃತಿ ಮತ್ತು ಬೌದ್ಧಿಕ ಬೆಳವಣಿಗೆಯನ್ನು ಉತ್ತೇಜಿಸುವಲ್ಲಿ ತೃತೀಯ ಭಾಷೆ ಮಹತ್ವದ ಪಾತ್ರವನ್ನು ವಹಿಸುವ ಸಂಬಂಧ ಸಂಘ ಸಲ್ಲಿಸಿದ ಮನವಿಯಲ್ಲಿ ಒತ್ತಿಹೇಳಲಾಗಿದೆ.

ಅಂಕಗಳ ಬದಲಿಗೆ ಕೇವಲ ಗ್ರೇಡ್‌ಗಳನ್ನು ನೀಡುವ ವ್ಯವಸ್ಥೆಯಿಂದಾಗಿ ತೃತೀಯ ಭಾಷಾ ವಿಷಯದ ಶೈಕ್ಷಣಿಕ ಪ್ರಾಮುಖ್ಯತೆಯನ್ನು ಕಡಿಮೆ ಮಾಡಬಹುದು. ಜೊತೆಗೆ ವಿದ್ಯಾರ್ಥಿಗಳು ತೃತೀಯ ಭಾಷೆಯನ್ನು ಗಂಭೀರವಾಗಿ ಕಲಿಯುವ ಆಸಕ್ತಿಯ ಮೇಲೆ ವ್ಯತಿರಿಕ್ತ ಪರಿಣಾಮ ➘ 2

- **ಪ್ರಮುಖ ಆತಂಕಗಳು**
  - ತೃತೀಯ ಭಾಷೆಯ ಪ್ರಾಮುಖ್ಯತೆ ಕಡಿಮೆಯಾಗುವ ಸಾಧ್ಯತೆ
  - ವಿದ್ಯಾರ್ಥಿಗಳಲ್ಲಿ ಆಸಕ್ತಿ ಕುಗ್ಗುವ ಭೀತಿ
  - ಪರಿಣಾಮ:
  - ಭಾಷಾ ವೈವಿಧ್ಯತೆ
  - ಬೌದ್ಧಿಕ ಬೆಳವಣಿಗೆ
  - ಶಿಕ್ಷಕರು, ಪೋಷಕರಲ್ಲಿ ಆತಂಕ
- **ರಾಜ್ಯಪಾಲರ ಅಭಿಪ್ರಾಯ**
  - ವಿಷಯವನ್ನು ಸಮಗ್ರವಾಗಿ ಪರಿಶೀಲಿಸಬೇಕು
  - ಗಮನಿಸಬೇಕಾದ ಅಂಶಗಳು:
  - ಶೈಕ್ಷಣಿಕ, ಆಡಳಿತಾತ್ಮಕ
  - ವಿದ್ಯಾರ್ಥಿಗಳ ಹಿತದೃಷ್ಟಿಯಿಂ ದ ಕ್ರಮ ಕೈಗೊಳ್ಳಲು ಸೂಚನೆ
- **ಸರ್ಕಾರದ ನಿರ್ಧಾರ**
  - ತೃತೀಯ ಭಾಷೆಗೆ ಅಂಕಗಳ ಬದಲು ಗ್ರೇಡ್, ಅನ್ವಯ:, ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿ ಗಳು (ಹಿಂದಿ ಸೇರಿದಂತೆ)
  - ಉದ್ದೇಶ:
  - ವಿದ್ಯಾರ್ಥಿಗಳ ಒತ್ತಡ ಕಡಿಮೆ ಮಾಡುವುದು

## 30ಲಕ್ಷ ಬೆಲೆಬಾಳುವ ಶೆಡ್‌ಗೆ ಬೆಂಕಿ

■ ಕನ್ನಡ ಮಾತೃ ಭೂಮಿ ವಾರ್ತೆ



**ಯಾದಗಿರಿ,ಏ.3**-ಯಾದಗಿರಿ ಜಿಲ್ಲೆಯ ಅಬ್ಬೆತುಮಕೂರು ಗ್ರಾಮದ ಸರ್ವೇ ನಂವರ 205 ವಿಸ್ತೀರ್ಣ 15 ಎಕರೆ 14 ಗುಂಟೆ ಜಮೀನಿನ ಮಾಲಿಕರಾದ ಶಂಶುದ್ದಿನ ತಂದೆ ಅಬ್ದುಲ್ ಸಮದ ಖಾದ್ರಿ, ಸಾಕಿನ ಶಹಾಬಾದ, ಎನ್ನುವ ವ್ಯಕ್ತಿ ತೆಲಂಗಾಣ ಮೂಲದ ಗೋದುರಿ ಸೂರ್ಯ ರೋಶನ್ ರಾಜು ತಂದೆ ಗೋದುರಿ ಗೋಪಲ ಕೃಷ್ಣ ರಾಜು ಎನ್ನುವ ವ್ಯಕ್ತಿಗೆ 2019 ರಲ್ಲಿ ಮಾರಾಟ ಮಾಡಿರುತ್ತಾನೆ. ಇದಕ್ಕೆ ಸಂಬಂಧಿಸಿದ ಹನ್ನೊಂದು ಜನರನ್ನು ಒಪ್ಪಿಗೆ ಸಾಕ್ಷಿ ಪಡೆದು ನೊಂದಣಿಯಾಗಿರುತ್ತದೆ. ಸದರಿ ಜಮೀನಿನಲ್ಲಿ ಹೈಟೆಕ್ ಶೆಡ್ ನಿರ್ಮಿಸಿಕೊಂಡಿದ್ದು, ಅಲ್ಲೆ ವಾಸವಾಗಿದ್ದ ಆಗಾಗ ತೆಲಂಗಾಣಕ್ಕೆ ಹೋಗಿ ಬರುತ್ತಿದ್ದರು.

ಅದೇ ಹೆಸರಿನ ಶಂಶುದ್ದಿನ ತಂದೆ ಅಬ್ದುಲ್ ಸಮದ ಖಾದ್ರಿ, ಸಾಕಿನ ದಬೀರ ಕಾಲೋನಿ ಯಾದಗಿರಿ ಮೂಲದ ವ್ಯಕ್ತಿ ಸದರಿ ಜಮೀನಿನ ಪಹಣಿಯಲ್ಲಿರುವ ವ್ಯಕ್ತಿ ನಾನೆ ಇದ್ದೆನೆ ಎಂದು ಖರಿಧಿದಾರರಿಗೆ ವರ್ಗಾವಣೆ (ಮುಟೇಷನ್) ಆಗದಂತೆ ತಕರಾರು ಅರ್ಜಿ ಸಲ್ಲಿಸಿರುತ್ತಾನೆ. ➘ 2

## ಕೊನೆಗೂ ರಾಜ್ಯದಲ್ಲಿ ಬಹುನಿರೀಕ್ಷಿತ ಇ-ವಿಧಾನ ಯೋಜನೆ ಜಾರಿಗೆ ಕೂಡಿ ಬಂದ ಮುಹೂರ್ತ-ಯು.ಟಿ. ಖಾದರ್ ಘೋಷಣೆ

**ಬೆಂಗಳೂರು,ಏ.3**-ಕೊನೆಗೂ ಬಹುನಿರೀಕ್ಷಿತ ಕಾಗದ ರಹಿತ ವಿಧಾನಮಂಡಲ ಅಧಿವೇಶನ ನಡೆಸುವಾಗಿನ ಇ-ವಿಧಾನ ಯೋಜನೆಯ ಜಾರಿಗೆ ಮುಹೂರ್ತ ಕೂಡಿ ಬಂದಿದೆ. ದಶಕದಿಂದ ಘೋಷಣೆಯಾಗಿ ಉಳಿದುಕೊಂಡಿದ್ದ ಇ-ವಿಧಾನ ಯೋಜನೆ ಇದೀಗ ಅನುಷ್ಠಾನದ ಘಟ್ಟಕ್ಕೆ ಬಂದಿದೆ.



ಕೊನೆಗೂ ವಿಳಂಬ, ಗೊಂದಲ, ಹಣಕಾಸು ಪಾಲುದಾರಿಕೆ, ತಾಂತ್ರಿಕ ಸಮಸ್ಯೆಗಳು, ತೀರ್ಮಾನ ಕೈಗೊಳ್ಳುವಲ್ಲಿನ ಕಾಲಹರಣದಿಂದ ಬಹುನಿರೀಕ್ಷಿತ ಕಾಗದ ರಹಿತ ಕಲಾಪಕ್ಕೆ ಅನುವು ಮಾಡುವ ಇ-ವಿಧಾನ ಯೋಜನೆ ಕಾರ್ಯರೂಪಕ್ಕೆ ಬರಲಿದೆ. ಈ ಬಗ್ಗೆ ವಿಧಾನಸಭೆ ಸ್ಪೀಕರ್ ಯು.ಟಿ. ಖಾದರ್ ಘೋಷಣೆ ಮಾಡಿದ್ದು, ಮುಂದಿನ ಅಧಿವೇಶನವನ್ನು ಕಾಗದ ರಹಿತ ನಡೆಸಲು ಮುಂದಾಗಿದೆ. ಸುಮಾರು 10 ವರ್ಷಗಳಿಂದ ಈ ಯೋಜನೆ ನೆನೆಗುದಿಗೆ ಬಿದ್ದಿತ್ತು. ಐಟಿ ಕ್ರಾಂತಿಯಲ್ಲಿ ಮುಂಚೂಣಿಯಲ್ಲಿರುವ ಕರ್ನಾಟಕ ವಿಧಾನಮಂಡಲ ಕಲಾಪ ಡಿಜಟಲೀಕರಣ ಮಾಡುವಲ್ಲಿ ವಿಳಂಬ ಧೋರಣೆ ತೋರುತ್ತಿರುವ ಬಗ್ಗೆ ಸಾಕಷ್ಟು ಟೀಕೆ, ಆರೋಪಗಳು ಕೇಳಿ ಬರುತ್ತಿತ್ತು.

ತಂತ್ರಜ್ಞಾನ, ಆರ್ಥಿಕ ಪ್ರಗತಿಯಲ್ಲಿ ಹಿಂದುಳಿದ ಹಲವು ರಾಜ್ಯಗಳೇ ಪೇಪರ್ ಲೆಸ್ ಕಲಾಪಕ್ಕಾಗಿ ಇ-ವಿಧಾನ ಅಳವಡಿಸಿ ವರ್ಷಗಳೇ ಕಳೆದುಹೋಗಿದೆ. ಆದರೆ, ಐಟಿಯಲ್ಲಿ ಅಗ್ರಗಣ್ಯವಾಗಿರುವ ಪ್ರಗತಿಶೀಲ ರಾಜ್ಯ ಕರ್ನಾಟಕಕ್ಕೆ ರಾಜ್ಯದ ನೀತಿ ನಿರೂಪಿಸುವ, ಕಾನೂನು ರಚಿಸುವ, ಮಹತ್ವದ ಮಸೂದೆಗಳು, ಹಲವು ಅಭಿವೃದ್ಧಿ ಪರ ಕಾರ್ಯಕ್ರಮ, ತೀರ್ಮಾನಗಳನ್ನು ಕೈಗೊಳ್ಳುವ ಶಕ್ತಿ ಕೇಂದ್ರವಾಗಿರುವ ಸದನವನ್ನೇ ಡಿಜಿಟಲೀಕರಣ ಮಾಡಲು ಸಾಧ್ಯವಾಗದೇ ಇದ್ದಿದ್ದು ಒಂದು ಅಪವಾದವಾಗಿ ಉಳಿದುಕೊಂಡಿತ್ತು. ತಂತ್ರಜ್ಞಾನ ಅಳವಡಿಕೆಯಲ್ಲಿ ಸದಾ ಮುಂಚೂಣಿಯಲ್ಲಿರುವ ಕರ್ನಾಟಕ ವಿಳಂಬವಾಗಿ ವಿಧಾನಮಂಡಲ ಕಲಾಪಗಳನ್ನು ಇದೀಗ ಸಂಪೂರ್ಣವಾಗಿ ಡಿಜಿಟಲೀಕರಣ ಮಾಡಲು ತೀರ್ಮಾನಿಸಿರುವುದು ದೊಡ್ಡ ವಿಪರ್ಯಾಸ ಆದರೂ ನಿಟ್ಟುಸಿರು ಬಿಡುವ ವಿಚಾರವಾಗಿದೆ.

ಇ - ವಿಧಾನ ವಿಳಂಬಕ್ಕೆ ಕಾರಣ ಏನು?: ಕರ್ನಾಟಕ ವಿಧಾನ ಮಂಡಲ ಕಲಾಪವನ್ನು ಸಂಪೂರ್ಣವಾಗಿ ಪೇಪರ್ ಲೆಸ್ ಮಾಡುವ ಮಹತ್ವದ ಯೋಜನೆಯಾದ ಇ-ವಿಧಾನ ಜಾರಿ ಮರೀಚಿಕೆಯಾಗೇ ಉಳಿದುಕೊಂಡಿತ್ತು. ಇ-ವಿಧಾನ ಅಳವಡಿಕೆ ಮಾಡುವುದಾಗಿ ಬರೇ ಭರವಸೆಗಳನ್ನೇ ಕೊಡಲಾಗುತ್ತಿತ್ತು ಹೊರತು, ಅದರ ಅನುಷ್ಠಾನ ಮಾತ್ರ ಬರೇ ಘೋಷಣೆಗೆ ಸೀಮಿತವಾಗಿತ್ತು. ಇ-ವಿಧಾನ ಕೇಂದ್ರ ಸರ್ಕಾರ ಅನುದಾನಿತ ಮಹತ್ವದ ಯೋಜನೆಯಾಗಿದೆ.

ದೇಶದ ಎಲ್ಲ ರಾಜ್ಯಗಳ ವಿಧಾನಮಂಡಲ ಕಲಾಪಗಳನ್ನು ಸಂಸತ್ತು ಮಾದರಿ ಕಾಗದ ರಹಿತ ಮಾಡಬೇಕು ಎಂದು 2014ರಲ್ಲಿ ಇ-ವಿಧಾನ ಯೋಜನೆಯ ರೂಪುರೇಷೆ ರೂಪಿಸಲಾಗಿತ್ತು. ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ 60:40 ಅನುಪಾತದಲ್ಲಿ ಅನುದಾನ ಹಂಚಿಕೆಯೊಂದಿಗೆ ➘ 2

> ವಿಧಾನಸಭೆಯಲ್ಲಿ ಕಾಗದರಹಿತ ಕಲಾಪ ವ್ಯವಸ್ಥೆ ಜಾರಿಗೆ ತರಲಾಗುತ್ತಿದೆ. ಈ ಸಂಬಂಧ ಸರ್ಕಾರನೂ ಅನುಮತಿ ನೀಡಿದೆ. ಮುಂದಿನ ಮೂರು ತಿಂಗಳಲ್ಲಿ ಕಾರ್ಯಕಲಾಪ ಸಂಪೂರ್ಣ ಡಿಜಿಟಲ್ ವ್ಯವಸ್ಥೆ ತರಲಾಗುವುದು. ಜೊತೆಗೆ ಶಾಸಕರ ಹಾಜರಾತಿಗೆ ಇನ್ಮುಂದೆ ಬೆರಳಚ್ಚು ಆಧಾರಿತ ಬಯೋಮೆಟ್ರಿಕ್ ವ್ಯವಸ್ಥೆ ಜಾರಿಗೆ ತರಲಾಗುವುದು. ಇಷ್ಟು ದಿನ ಶಾಸಕರು ಹಾಜರಾತಿ ಪುಸ್ತಕದಲ್ಲಿ ಸಹಿ ಹಾಕುತ್ತಿದ್ದರು. ಇದೀಗ ಬಯೋಮೆಟ್ರಿಕ್ ವ್ಯವಸ್ಥೆ ಜಾರಿಗೆ ತರುತ್ತೇವೆ.
> -ಯು.ಟಿ. ಖಾದರ್, ಸ್ಪೀಕರ್.

## ಅದ್ದೂರಿಯಾಗಿ ನಡೆದ ಶ್ರೀ ರಾಮಲಿಂಗೇಶ್ವರ ಜಾತ್ರಾ ಮಹೋತ್ಸವ

**ರಾಯಚೂರು,ಏ.3**- ತಾಲೂಕಿನ ಮರ್ಚೆಡ್ ಗ್ರಾಮದಲ್ಲಿ ಶ್ರೀ ರಾಮಲಿಂಗೇಶ್ವರ ಜಾತ್ರಾ ಮಹೋತ್ಸವದ ನಿಮಿತ್ತ ಮಹಾ ರಥೋತ್ಸವ ಅದ್ದೂರಿಯಾಗಿ ಜರುಗಿತು.

ಜಾತ್ರಾ ಮಹೋತ್ಸವ ಅಂಗವಾಗಿ ವಿಶೇಷ ಪೂಜೆ, ಮಹಾ ಮಂಗಳಾರತಿ, ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳು ಜರುಗಿದವು, ಶ್ರೀ ರಾಮಲಿಂಗೇಶ್ವರ ದೇವರ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿರಿಸಿ ಮೆರವಣಿಗೆ ನಡೆಸಲಾಯಿತು. ಸಕಲ ವಾದ್ಯಗಳೊಂದಿಗೆ ಮಹಾ ರಥೋತ್ಸವದಲ್ಲಿ ವಿವಿಧ ಗ್ರಾಮಗಳಿಂದ ಆಗಮಿಸಿದ ಭಕ್ತರು ರಥವನ್ನು ಎಳೆದು ಸಂಭ್ರಮಿಸಿ ಶ್ರೀ ರಾಮಲಿಂಗೇಶ್ವರ ಕೃಪೆಗೆ ಪಾತ್ರರಾದರು.

## ಕೋಟೆ ಬಡಾವಣೆಯಲ್ಲಿ ಹನುಮ ಜಯಂತಿ ಆಚರಣೆ

**ರಾಯಚೂರು,ಮಾ.3**-ನಗರದ ವಾರ್ಡ್ ನಂ.9ರ ಗಂಗಾನಿವಾಸ ಕೋಟೆ ಬಡಾವಣೆಯಲ್ಲಿ ಹನುಮ ಜಯಂತಿ ಅಂಗವಾಗಿ ಶ್ರೀ ವರವೀರ ಮಾರುತಿ ಭಕ್ತ ಭಜನಾ ಮಂಡಳಿ ಸಮಿತಿಯ ವತಿಯಿಂದ ವಿಶೇಷ ಪೂಜೆ ನಡೆಯಿತು.

36ನೇ ವರ್ಷದ ಹನುಮ ಜಯಂತಿ ಪ್ರಯುಕ್ತ ದೇವಸ್ಥಾನದಲ್ಲಿ ಭಕ್ತಿಪೂರ್ವಕವಾಗಿ ಪೂಜೆ ಸಲ್ಲಿಸಲಾಯಿತು. ಬಳಿಕ ಭಕ್ತರು ಹಾಗೂ ಸಾರ್ವಜನಿಕರಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಯಿತು. ಕಾರ್ಯಕ್ರಮದಲ್ಲಿ ಸ್ಥಳೀಯರು, ಭಕ್ತರು ಹಾಗೂ ಸಮಿತಿ ಸದಸ್ಯರು ಭಾಗವಹಿಸಿ ಹನುಮ ಜಯಂತಿಯನ್ನು ಭಕ್ತಿಭಾವದಿಂದ ಆಚರಿಸಿದರು.

## ದಾಖಲೆ ಪ್ರಮಾಣದಲ್ಲಿ ಟ್ಯಾಕ್ಸ್ ಸಂಗ್ರಹ, ಮಸ್ಕಿ ತಾಲೂಕ ಪ್ರಥಮ

■ ಕನ್ನಡ ಮಾತೃ ಭೂಮಿ ವಾರ್ತೆ



**ಮಸ್ಕಿ,ಏ.2**-ತೆರಿಗೆ ವಸೂಲಾತಿಯಲ್ಲಿ ರಾಯಚೂರು ಜಿಲ್ಲೆ ಪ್ರಥಮ ಸ್ಥಾನ ಪಡೆದಿದೆ.ಅದರಲ್ಲೂ ಮಸ್ಕಿ ತಾಲೂಕು ಜಿಲ್ಲಾ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದು,ಗಮನಾರ್ಹ ಸಾಧನೆಗೈದಿದೆ.

ನೀರಾವರಿ ಮತ್ತು ಒಣ ಬೇಸಾಯ ಆಶ್ರಿತ 21 ಗ್ರಾಪಂಗಳನ್ನು ಒಳಗೊಂಡಿರುವ ಮಸ್ಕಿ ತಾಲೂಕಿಗೆ ಕಳೆದ ಆರ್ಥಿಕ ವರ್ಷಕ್ಕೆ 4.49 ಕೋಟಿ ರೂ.ಕರ ವಸೂಲಾತಿ ಗುರಿ ನಿಗದಿಪಡಿಸಲಾಗಿತ್ತು.್ಈ ಪೈಕಿ 2.53 ಕೋಟಿ ರೂ.ತೆರಿಗೆ ಸಂಗ್ರಹಿಸಿ ಶೇ.56.43 ಪ್ರಗತಿ ಸಾಧಿಸುವ ಮೂಲಕ ನೂತನ ದಾಖಲೆ ಬರೆದಿದೆ.21 ಗ್ರಾಪಂಗಳ ಪೈಕಿ ಹಿರೇದಿನ್ನಿ,ತೋರಣದಿನ್ನಿ,ವಟಗಲ್ ಶೇ.100 ತೆರಿಗೆ ವಸೂಲಿ ಮಾಡಿವೆ.ಗ್ರಾಮೀಣಾಭಿವೃದ್ಧಿಯ ವಿಕೇಂದ್ರಿಕರಣದಲ್ಲಿ ಗ್ರಾಮ ಪಂಚಾಯತಿಗಳು ನಿರ್ಣಾಯಕ ಪಾತ್ರ ನಿರ್ವಹಿಸುತ್ತಿವೆ.

ಸ್ಥಳೀಯರಿಗೆ ಕುಡಿಯುವ ನೀರು,ಬೀದಿ ದೀಪಗಳ ನಿರ್ವಹಣೆ,ಶೌಚಾಲಯ ನಿರ್ಮಾಣ,ಆಸ್ತಿಗಳಿಗೆ ಸಂಬಂಧಿಸಿದ ದಾಖಲೆ ಪತ್ರ ವಿತರಣೆ,ಉದ್ಯೋಗ ಖಾತ್ರಿ,ಜನನ ಮತ್ತು ಮರಣ ಪ್ರಮಾಣ ಪತ್ರ ವಿತರಣೆ ಸೇರಿ ಪ್ರತಿಯೊಂದು ಸಾರ್ವಜನಿಕ ಸಮಸ್ಯೆಗಳಿಗೆ ಸ್ಪಂದಿಸುವ ಗ್ರಾಪಂಗಳು ಸ್ಥಳೀಯರಿಗೆ ಬಹಳಷ್ಟು ಅನುಕೂಲ ಕಲ್ಪಿಸಿವೆ. ➘ 2

## ಹಟ್ಟಿ ಚಿನ್ನದ ಗಣಿಯಲ್ಲಿ ಲಿಫ್ಟ್ ಸ್ಥಗಿತ: 8 ಜನ ಕಾರ್ಮಿಕರು ಅಸ್ವಸ್ಥ

■ ಕನ್ನಡ ಮಾತೃ ಭೂಮಿ ವಾರ್ತೆ



**ರಾಯಚೂರು,ಏ.3**-ಹಟ್ಟಿ ಚಿನ್ನದ ಗಣಿ ಕಂಪನಿಯಲ್ಲಿ ಶಾರ್ಟ್ ಸರ್ಕ್ಯೂಟ್ ಪರಿಣಾಮದಿಂದ ಕೇಜ್(ಲಿಫ್ಟ್) ಸ್ಥಗಿತಗೊಂಡು 8 ಜನ ಕಾರ್ಮಿಕರು ಕೆಲಕಾಲ ಲಿಫ್ಟ್‌ನಲ್ಲಿ ಸಿಲುಕಿ ಅಸ್ವಸ್ಥಗೊಂಡಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದೆ.

ಜಿಲ್ಲೆಯ ಲಿಂಗಸೂಗೂರು ತಾಲೂಕಿನ ಹಟ್ಟಿ ಪಟ್ಟಣದ ಗೋಲ್ಡ್ ಮೈನ್‌ನಲ್ಲಿ ಘಟನೆ ಸಂಭವಿಸಿದೆ. ಎಂದಿನಂತೆ ಬುಧವಾರ ರಾತ್ರಿ 11.30ರ ಪಾಳಿಗೆ 10 ಜನ ಕಾರ್ಮಿಕರು 2400 ಅಡಿಯ ಭೂ ಕೆಳಮೈಗೆ ಲಿಫ್ಟ್‌ನಲ್ಲಿ ಕರ್ತವ್ಯಕ್ಕೆ ತೆರಳುತ್ತಿದ್ದರು. ಇದರಲ್ಲಿ 2 ಕಾರ್ಮಿಕರು 1800 ಲೆವೆಲ್‌ನಲ್ಲಿ ಇಳಿದಿದ್ದರು. ಇನ್ನುಳಿದ 8 ಕಾರ್ಮಿಕರು 2400 ಲೆವೆಲ್‌ಗೆ ಹೋಗುತ್ತಿದ್ದರು. ಆಗ 2200 ರಿಂದ 2300 ಲೆವೆಲ್ ನಡುವೆ ಲಿಫ್ಟ್ ಸ್ಥಗಿತಗೊಂಡಿದೆ.

ಇದರಿಂದ ಕೇಜ್‌ನಲ್ಲಿ ಉಳಿದ ಕಾರ್ಮಿಕರು ಕಕ್ಕಾಬಿಕ್ಕಿಯಾಗಿ ಗಾಬರಿಗೊಂಡರು. ಘಟನೆ ಮಾಹಿತಿ ತಿಳಿದ ಹಾಸ್ಟಿಂಗ್ ವಿಭಾಗದ ಸಿಬ್ಬಂದಿ ದುರಸ್ತಿ ಕಾರ್ಯಕ್ಕೆ ಮುಂದಾದರು. ಅಷ್ಟರಲ್ಲಿ ಉಸಿರಾಟ ತೊಂದರೆಯಿಂದ ಓರ್ವ ಕಾರ್ಮಿಕ ತಲೆಸುತ್ತಿ ಬಿದ್ದಿದ್ದರು. ಸುಮಾರು 2 ತಾಸಿನವರೆಗೆ ಕೇಜ್ ದುರಸ್ತಿ ಕಾರ್ಯ ಮುಗಿಸಿ ಮೇಲಕ್ಕೆ ತಂದು, ಎಂಟು ಮಂದಿಯನ್ನು ಹಟ್ಟಿ ಗೋಲ್ಡ್ ಮೈನ್ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಲಾಯಿತು. ಸದ್ಯ ಕಾರ್ಮಿಕರು ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈ ಸಂಬಂಧ ಕಂಪನಿಯ ಅಧಿಕಾರಿಯೊಬ್ಬರನ್ನು ದೂರವಾಣಿ ಮೂಲಕ ಸಂಪರ್ಕಿಸಿದಾಗ, ತಾಂತ್ರಿಕ್ ತೊಂದರೆಯಿಂದ ಸಮಸ್ಯೆಯಾಗಿತ್ತು. ಕೂಡಲೇ ಕಾರ್ಯಪ್ರವೃತ್ತರಾಗಿ ಕಾರ್ಮಿಕರನ್ನು ರಕ್ಷಣೆ ಮಾಡಲಾಗಿದ್ದು, ಕಾರ್ಮಿಕರಿಗೆ ಯಾವುದೇ ತೊಂದರೆಯಾಗಿಲ್ಲವೆಂದು ತಿಳಿಸಿದ್ದಾರೆ.

## ಮನ್ಸಾಲಾಪೂರ ಗ್ರಾಮದಲ್ಲಿ ಅದ್ದೂರಿಯಾಗಿ ಜರುಗಿದ ಹೂವಿನ ತೋಟದ ಆಂಜನೇಯ ಸ್ವಾಮಿ ರಥೋತ್ಸವ

**ರಾಯಚೂರು,ಏ.3**-ಹನುಮ ಜಯಂತಿ ನಿಮಿತ್ತ ತಾಲೂಕಿನ ಮನ್ಸಲಾಪೂರ ಗ್ರಾಮದಲ್ಲಿ ಹೂವಿನ ತೋಟದ ಆಂಜನೇಯ ಸ್ವಾಮಿಯ ನೂತನ ರಥೋತ್ಸವ ವಿಜೃಂಭಣೆಯಿಂದ ಅದ್ದೂರಿಯಾಗಿ ಜರುಗಿತು.ಬೆಳಗ್ಗೆಯಿಂದಲೇ ಹೂವಿನ ತೋಟದ ಆಂಜನೇಯ ಮೂರ್ತಿಗೆ ವಿವಿಧ ಪೂಜಾ ಕೈಂಕರ್ಯಗಳು ಜರುಗಿದವು, ಬಾಜಿ ಭಜಂತ್ರಿಯೊಂದಿಗೆ ಗ್ರಾಮದಿಂದ ಪಲ್ಲಕ್ಕಿ ಸೇವೆ, ಮಹಿಳೆಯರು ಕಳಸ ಹೊತ್ತು ಸಾಗಿದರು.

ದೇವಸ್ಥಾನದಲ್ಲಿ ಭಕ್ತರು ಸರತಿ ಸಾಲಿನಲ್ಲಿ ಬಂದು ವಿಶೇಷ ಪೂಜೆ ಸಲ್ಲಿಸಿದರು. ಆಂಜನೇಯ ಮೂರ್ತಿಯ ಮೆರವಣಿಗೆ ನಡೆಸಿ ನೂತನವಾಗಿ ನಿರ್ಮಾಣಗೊಂಡ ರಥದಲ್ಲಿರಿಸಿ ಕಿಲ್ಲೆ ಬೃಹನ್ಮಠದ ಶಾಂತಮಲ್ಲಾ ಶಿವಾಚಾರ್ಯ ಮಹಾಸ್ವಾಮಿಗಳು ವಿಶೇಷ ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡಿದರು.

ಭಕ್ತರು ನೂತನ ರಥವನ್ನು ಎಳೆದು ಪುನೀತರಾದರು. ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಿದ ಭಕ್ತರು ನೂತನ ರಥೋತ್ಸವದಲ್ಲಿ ಭಾಗವಹಿಸಿ ಆಂಜನೇಯ ಸ್ವಾಮಿ ದರ್ಶನ ಪಡೆದು ಪುನೀತರಾದರು. ರಥೋತ್ಸವಕ್ಕೆ ಬಂದ ಭಕ್ತಾಧಿಗಳಿಗೆ ಅನ್ನ ಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿತ್ತು.

## ಮಗನ ಮೇಲೆ ಹಲ್ಲೆ ಮಾಡಿದ ಹಟ್ಟಿ ಪೊಲೀಸ್ ಠಾಣೆಯ ಕಾನ್‌ಸ್ಟೇಬಲ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಉಮಾಮಹೇಶ್ವರಿ ಮನವಿ


■ ಕನ್ನಡ ಮಾತೃ ಭೂಮಿ ವಾರ್ತೆ



**ರಾಯಚೂರು,ಏ.3**-2025ರ ಡಿಸೆಂಬರ್‌ನಲ್ಲಿ ಹಟ್ಟಿ ಪೊಲೀಸ್ ಠಾಣೆಯ ಕಾನಸ್ಟೇಬಲ್ ಶರಣಬಸವ ನಾಯಕ ಎಂಬುವವರು ಮನೆಗೆ ನುಗ್ಗಿ ವಿನಾಕಾರಣ ನನ್ನ ಮಗನ ಮೇಲೆ ಹಲ್ಲೆ ಮಾಡಿ, ಪೊಲೀಸ್ ಠಾಣೆಗೆ ಎಳೆದೊಯ್ದಿದ್ದು, ಪ್ರಕರಣ ದಾಖಲಿಸಿದರೂ ಈವರೆಗೂ ಪೊಲೀಸರು ಕ್ರಮ ಕೈಗೊಳ್ಳುತ್ತಿಲ್ಲ ಎಂದು ಹಲ್ಲೆಗೊಳಗಾದ ಯುವಕನ ತಾಯಿ ಲಿಂಗಸುಗೂರಿನ ಉಮಾಮಹೇಶ್ವರಿ ದೂರಿದರು.

ಅವರಿಂದು ಮಾಧ್ಯಮಗೋಷ್ಠಿಯನ್ನುದ್ದೇಶಿಸಿ ಮಾತನಾಡಿ, 2025ರ ಡಿಸೆಂಬರ್ 9ರಂದು ಲಿಂಗಸುಗೂರಿನಲ್ಲಿ ಮನೆಯಲ್ಲಿದ್ದಾಗ ಕಾನಸ್ಟೇಬಲ್ ಶರಣಬ ಸವ ನಾಯಕ, ಹಾಗೂ ಅವರ ಕುಟುಂಬ ದವರು ಗುಂಪು ಕಟ್ಟಿಕೊಂಡು ಬಂದು, ನನ್ನ ಮಗನನ್ನು ಹೊರಗೆ ಬಾ ಎಂದು ಕರೆದು ನಿಮ್ಮ ಮಗ ಮತ್ತು ಆತನ ಸ್ನೇಹಿತರು ನನ್ನ ಮಗಳನ್ನು ಚುಡಾಯಿಸುತ್ತಿದ್ದಾರೆ ಎಂದು ➘ 2

## ಮೊಹಬ್ಬತಿನ ಮಹಲಿಗೂ ಬೆಂಕಿ ಕೃತಿ ಲೋಕಾರ್ಪಣೆ, ವಿದ್ಯಾಧಾತೆ ಪ್ರಶಸ್ತಿ ಪ್ರದಾನ ಏ.5ಕ್ಕೆ-ಮಹಾಂತೇಶ ಬಿರಾದಾರ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.3**-ಜಿಲ್ಲಾ ಹಾಗೂ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು, ಸುದೀಕ್ಷಾ ಪ್ರಕಾಶನದ ವತಿಯಿಂದ ಮೊಹಬ್ಬತಿನ ಮಹಲಿಗೂ ಬೆಂಕಿ ಎಂಬ ಚೊಚ್ಚಲ ಕೃತಿ ಬಿಡುಗಡೆ ಸಮಾರಂಭ ಹಾಗೂ ಮಹಿಳಾ ದಿನಾಚರಣೆ ಹಾಗೂ ಮಹಿಳಾ ಸಾಧಕಿ ಶಿಕ್ಷಕಿಯರಿಗೆ ವಿದ್ಯಾಧಾತೆ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಏ.5ರಂದು ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಾಶನದ ಸಂಸ್ಥಾಪಕ ಹಾಗೂ ಕೃತಿಕಾರ ಮಹಾಂತೇಶ ಬಿರಾದಾರ ಹೇಳಿದರು.

ಅವರಿಂದು ಮಾಧ್ಯಮಗೋಷ್ಠಿಯನ್ನುದ್ದೇಶಿಸಿ ಮಾತನಾಡಿ, ಮೊಹಬ್ಬತಿನ ಮಹಲಿಗೂ ಬೆಂಕಿ ಕೃತಿಯು ನನ್ನ ಚೊಚ್ಚಲ ಕೃತಿಯಾಗಿದ್ದು, ಕೃತಿ ಲೋಕಾರ್ಪಣೆ ಹಾಗೂ ವಿದ್ಯಾಧಾತೆ ಪ್ರಶಸ್ತಿ ಪ್ರದಾನ ಸಮಾರಂಭ ನಗರದ ವೀರಶೈವ ಕಲ್ಯಾಣ ಮಂಟಪದಲ್ಲಿ ನಡೆಯಲಿದ್ದು, ಕೃತಿ ಲೋಕಾರ್ಪಣೆ ಕಾರ್ಯಕ್ರಮಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಸಹಕಾರವೂ ಇದೆ ಎಂದರು.

ಕಾರ್ಯಕ್ರಮವನ್ನು ಆದಿಕವಿ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಕೆ.ವೆಂಕಟೇಶ ಉದ್ಘಾಟಿಸಲಿದ್ದಾರೆ. ಪುಸ್ತಕ ಲೋಕಾರ್ಪಣೆಯನ್ನು ಇಲಕಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಹಾಗೂ ಕವಿ ಆರೀಫ್ ರಾಜಾ ನೆರವೇರಿಸಲಿದ್ದು, ಕಥೆಗಾರ ಶರಣಬಸವ.ಕೆ.ಗುಡದಿನ್ನಿ ಪುಸ್ತಕ ಪರಿಚಯ ಮಾಡಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ತಾಲೂಕು ಕಸಾಪ ಅಧ್ಯಕ್ಷ ವಿಜಯರಾಜೇಂದ್ರ ವಹಿಸಿಕೊಳ್ಳಲಿದ್ದಾರೆ. ಜೊತೆಗೆ ಜಿಲ್ಲೆಯ ಸಾಹಿತಿಗಳು, ಕವಿಗಳು ಕಾರ್ಯಕ್ರಮದ ವೇದಿಕೆಯನ್ನು ಹಂಚಿಕೊಳ್ಳಲಿದ್ದಾರೆ ಎಂದು ತಿಳಿಸಿದರು. ➘ 2

## ಕಲ್ಲೂರು: ಜಗದ್ಗುರು ಶಂಕರಾಚಾರ್ಯರ 36ನೇ ಜಾತ್ರಾ ಮಹೋತ್ಸವ-ಸಾಮೂಹಿಕ ವಿವಾಹ

# ನವ ದಂಪತಿಗಳು ಆದರ್ಶ ಗುಣಗಳನ್ನು ಅಳವಡಿಸಿಕೊಳ್ಳಬೇಕು - ಭೋಸರಾಜು

ಕನ್ನಡ ಮಾತೃ ಭೂಮಿ ವಾರ್ತೆ

**ಸಿರವಾರ,ಏ.03-** ದಾಂಪತ್ಯ ಜೀವನಕ್ಕೆ ಕಾಲಿಡುವ ನವ ದಂಪತಿಗಳು ಆದರ್ಶ ಗುಣಗಳನ್ನು ಅಳವಡಿಸಿಕೊಂಡು ಪರಸ್ಪರ ಹೊಂದಾಣಿ ಕೆಯಿಂದ ಜೀವನ ನಡೆಸಬೇಕು. ಪ್ರತಿ ಯೊಬ್ಬರೂ ತಮ್ಮ ಮಕ್ಕಳನ್ನು ಸಂಸ್ಕಾರ ಯುತರಾಗಿ ಬೆಳೆಸಬೇಕು ಎಂದು ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಇಲಾಖೆ ಸಚಿವ ಎನ್.ಎಸ್. ಬೋಸರಾಜು ರವರು ಹೇಳಿದರು.

ತಾಲೂಕಿನ ಕಲ್ಲೂರು ಗ್ರಾಮದ ದತ್ತಾತ್ರೇಯ ಅವಧೂತ ಪೀಠ ಜಗದ್ಗುರು ಶಂಕರಾಚಾರ್ಯ ಮಠದ ವತಿಯಿಂದ ಆಯೋಜಿಸಿದ್ದ ಉಚಿತ ಸಾಮೂಹಿಕ ವಿವಾಹ ಮತ್ತು ಜಗದ್ಗುರು ಶಂಕರಾಚಾರ್ಯರ 36ನೇ ಜಾತ್ರಾ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸಾಮೂಹಿಕ ವಿವಾಹದಲ್ಲಿ ಮದುವೆ ಆಗುವುದರಿಂದ ಆರ್ಥಿಕ ಹೊರೆ ತಡೆಯಬಹುದು ಮತ್ತು ಆರ್ಥಿಕವಾಗಿ ಸಂಕಷ್ಟ ಎದುರುಸುತ್ತಿರುವ ಕುಟುಂಬಗಳಿಗೆ ಸಾಮೂಹಿಕ ವಿವಾಹ ಕಾರ್ಯಕ್ರಮಗಳು ಸಹಕಾರಿಯಾಗಿವೆ ಎಂದರು.



ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ನೂತನವಾಗಿ 13 ನವ ಜೋಡಿಗಳು ದಾಂಪತ್ಯ ಜೀವನಕ್ಕೆ ಕಾಲಿಟ್ಟರು.

ಕಾರ್ಯಕ್ರಮದಲ್ಲಿ ಶಿವರಾಮಕೃಷ್ಣನಂದ ಮಹಾಸ್ವಾಮಿಗಳು ಶಂಕರಾಚಾರ್ಯರ ಮಠ ಭಾಗ್ಯನಗರ ಕೊಪ್ಪಳ, ಜ್ಞಾನನಂದ ಮಹಾರಾಜರು ಶಿವಾನಂದ ಮಠ ಮಟಮಾರಿ, ದತ್ತಾತ್ರೇಯ ಅವಧೂತ ಪೀಠದ ಜಗದ್ಗುರು ಶಂಕರಾಚಾರ್ಯ ಮಠದ ಶಿವರಾಮಾನಂದ ಭಾರತಿ ಸ್ವಾಮೀಜಿ ಕಲ್ಲೂರು, ಬಿಳಿಯಾನ ಸಿದ್ದ ಮಹಾಸ್ವಾಮಿಗಳು ಯೋಗಿ ಸಿದ್ದೇಶ್ವರ ಆಶ್ರಮ ಜೋಕಾನಟ್ಟಿ, ಸ್ವರೂಪಾ ನಂದ ಮಹಾಸ್ವಾಮಿಗಳು, ಮಾರೆಪ್ಪ ಗುರು ಆರೋಲಿ, ವಿರೇಶ ತಾತ ದಿನ್ನಿ ದಿವ್ಯಾ ಸಾನಿಧ್ಯವಹಿಸಿದ್ದರು.

ಈ ಸಂದರ್ಭದಲ್ಲಿ ಶಾಸಕರಾದ ಜಿ.ಹಂಪಯ್ಯ ನಾಯಕ, ಜಿ.ಪಂ ಮಾಜಿ ಸದಸ್ಯ ಬಶೀರುದ್ದೀನ್ ರಾಯಚೂರು, ಕೆ.ಭೀಮರೆಡ್ಡಿಪ್ಪ ಗೌಡ ಕಲ್ಲೂರು, ಎಂ.ಆರ್. ರಥಾನ್ ಲಾಲ್ ಬುಬೂ ಶೇಠ್, ಸುರೇಶ ರೆಡ್ಡಿ, ಯರಗೇರಾ ಬೀಮಾಶಪ್ಪ ತಾತ, ಜಹಾಂಗೀರ್ ಪಾಷ ಸಾಹುಕಾರ ಕಲ್ಲೂರು, ಗ್ರಾ.ಪಂ ಮಾಜಿ ಅಧ್ಯಕ್ಷ ಸಂಗಪ್ಪಗೌಡ, ಶಂಕರ ಶೇಠ್ ಮುಂಬೈ, ಸಿಡಿಪಿಓ ಇಲಾಖೆ ಅಧಿಕಾರಿ ಶಿವಾಲಕ್ಷ್ಮೀ, ಕಮಲಬಾಯಿ, ರಾಜೇಶ್ವರಿ, ಕೋಲಿಮಿ ಹನುಮಣ್ಣ ಯಾದವ್ ಕಲ್ಲೂರು, ದೇವಣ್ಣ ಹೊಸೂರು, ಮುದುಕಪ್ಪ, ಕೃಷ್ಣ ಯಾದವ್, ಸುರೇಶ ರೆಡ್ಡಿ, ಜುಟ್ಲು ನರಸಪ್ಪ, ಧನಂಜಯ, ಸೋಮಣ್ಣ ಶಿಕ್ಷಕರು, ಶ್ರೀಧರ್ ಕಲ್ಯಾಣ, ವೆಂಕಟೇಶ್ ಶಿಕ್ಷಕರು, ಶಿವಪ್ಪ ನಾಯಕ ಕಲ್ಲೂರು, ಸೇರಿದಂತೆ ಗ್ರಾಮಸ್ಥರು ಭಕ್ತಾದಿಗಳು ಉಪಸ್ಥಿತರಿದ್ದರು.

# ನೀರು ಶುದ್ಧೀಕರಣ ಘಟಕಗಳಿಗೆ ಪುರಸಭೆ ಮುಖ್ಯಾಧಿಕಾರಿ ದಿಡೀರ್ ಭೇಟಿ, ಪರಿಶೀಲನೆ

ಕನ್ನಡ ಮಾತೃ ಭೂಮಿ ವಾರ್ತೆ

**ಲಿಂಗಸುಗೂರ,ಏ.03-**ಪಟ್ಟಣದ ಪುರಸಭೆಯ ವ್ಯಾಪ್ತಿ ಯಲ್ಲಿ ಬರುವ ಕುಡಿಯುವ ನೀರಿನ ಶುದ್ಧೀಕರಣ ಘಟಕಗಳಿಗೆ ಪುರಸಭೆಯ ಮುಖ್ಯಾಧಿಕಾರಿ ನಟರಾಜ ಅವರು ತಮ್ಮ ಸಿಬ್ಬಂದಿಯೊಂದಿಗೆ ತೆರಳಿ ಪಟ್ಟಣದ ಕೈಗಾರಿಕೆ ಇಲಾಖೆ ಹತ್ತಿರ ಕಾರ್ಯ ನಿರ್ವಹಿಸುತ್ತಿರುವ ನೀರು ಶುದ್ಧೀಕರಣ ಹಾಗೂ ಮಿನರಲ್ ವಾಟರ್ ತಯಾರಿಕಾ ಘಟಕಗಳಿಗೆ ದಿಡೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ಪುರಸಭೆ ವತಿಯಿಂದ ನೀಡಲಾದ ಪರವಾನಿಗೆ, ಸಂಬಂಧಿಸಿದ ಇತರೆ ಇಲಾಖೆಗಳ ಅನುಮತಿ ಪತ್ರಗಳು, ನೀರಿನ ಗುಣಮಟ್ಟ ತಪಾಸಣೆ ವರದಿ ಸೇರಿದಂತೆ ಅಗತ್ಯ ದಾಖಲೆಗಳನ್ನು ಅಧಿಕಾರಿಗಳು ಪರಿಶೀಲಿಸಲು ಕೇಳಿದರು.

ಆದರೆ ಘಟಕದ ಮಾಲಕರು ಸ್ಥಳದಲ್ಲಿ ಲಭ್ಯವಾಗದ ಕಾರಣ ಅವರು ಬಂದ ನಂತರ ದಾಖಲೆಗಳನ್ನು ನೀಡುವುದಾಗಿ ನೀರಿನ ಘಟಕದಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿ ತಿಳಿಸಿದರು.



ಇದಕ್ಕೆ ಪ್ರತಿಕ್ರಿಯಿಸಿದ ಪುರಸಭೆ ಮುಖ್ಯಾಧಿಕಾರಿ ನಟರಾಜ ಅವರು, ಅಗತ್ಯ ದಾಖಲೆಗಳನ್ನು ಸಲ್ಲಿಸದ ಘಟಕಗಳಿಗೆ ನೋಟಿಸ್ ಜಾರಿ ಮಾಡುವುದಾಗಿ ಎಚ್ಚರಿಸಿದರು.

ಪಟ್ಟಣದಲ್ಲಿ ಪರವಾನಿಗೆ ಪಡೆಯದೆ ಇರುವ ಅಕ್ರಮ ನೀರು ಶುದ್ದೀಕರಣ ಘಟಕಗಳನ್ನು ಪರಿಶೀಲಿಸಿ ತಪ್ಪು ಕಂಡು ಬಂದಲ್ಲಿ ಆ ಘಟಕಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು. ಸರಕಾರದ ನಿಯಮಾವಳಿ ಹಾಗೂ ಮಾನದಂಡಗಳನ್ನು ಪಾಲಿಸದೆ ಅಕ್ರಮವಾಗಿ ನೀರು ಶುದ್ದೀಕರಣ ಘಟಕ ಕಂಡುಬಂದಲ್ಲಿ ನಿರ್ಧಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದೆಂದು ಅವರು ತಿಳಿಸಿದರು.

ಮಾರ್ಚ್ 31 ರಂದು ಅಕ್ರಮ ನೀರು ಶುದ್ಧೀಕರಣ ಘಟಕಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ನಮ್ಮ ಕರ್ನಾಟಕ ರಕ್ಷಣಾ ವೇದಿಕೆ ಮುಖಂಡರು ಸಂಘಟನೆಯ ಅಧ್ಯಕ್ಷರಾದ ತಿಮ್ಮಾರೆಡ್ಡಿ ಮುನ್ನೂರ ಅವರ ನೇತೃತ್ವದಲ್ಲಿ ಸಹಾಯಕ ಆಯುಕ್ತರಿಗೆ ಮನವಿ ಸಲ್ಲಿಸಿ ಒತ್ತಾಯಿಸಿದ್ದರು.

ಅವರ ಮನವಿಗೆ ಸ್ಪಂದಿಸಿದ ಪುರಸಭೆ ಮುಖ್ಯಾಧಿಕಾರಿಗಳು ಗುರುವಾರ ದಿಢೀರನೆ ಪಟ್ಟಣದಲ್ಲಿರುವ ನೀರು ಶುದ್ಧೀಕರಣ ಘಟಕಗಳನ್ನು ತಪಾಸಣೆ ನಡೆಸಿದರು.

# ಗ್ಯಾಸ್ ಬೆಲೆ ಏರಿಕೆ, ಅಕ್ರಮ ದಾಸ್ತಾನು, ಕೃತಕ ಅಭಾವ ಸೃಷ್ಟಿಸುವವರ ವಿರುದ್ಧ ಕಟ್ಟುನಿಟ್ಟಿನ ಕ್ರಮಜಿಲ್ಲಾಧಿಕಾರಿ ಸೂಚನೆ

ಕನ್ನಡ ಮಾತೃ ಭೂಮಿ ವಾರ್ತೆ

**ಬಳ್ಳಾರಿ,ಏ.03-**ಜಿಲ್ಲೆಯಲ್ಲಿ ಗೃಹಬಳಕೆ ಎಲ್‌ಪಿಜಿ, ಆಟೋ ಗ್ಯಾಸ್ ಬೆಲೆ ಏರಿಕೆ, ಕೃತಕ ಅಭಾವ ಸೃಷ್ಟಿಸುವ ಮಾರಾಟಗಾರರು ಹಾಗೂ ಅಕ್ರಮ ದಾಸ್ತಾನುದಾರರ ವಿರುದ್ಧ ಕಟ್ಟುನಿಟ್ಟಿನ ಕಾನೂನು ಕ್ರಮ ಜರುಗಿಸುವಂತೆ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಗುರುವಾರ, ನಗರದ ನೂತನ ಜಿಲ್ಲಾಡಳಿತ ಭವನದ ಕೆಸ್ವಾನ್ ವಿಡಿಯೋ ವಿವಿಧ ಇಲಾಖೆಗಳ ಅಧಿಕಾರಿಗಳು, ತಾಲ್ಲೂಕು ತಹಶೀಲ್ದಾರರೊಂ ದಿಗೆ ಸಭೆ ನಡೆಸಿ ಅವರು ಮಾತನಾಡಿದರು.

ಇತ್ತೀಚೆಗೆ ನಗರದ ಗ್ಯಾಸ್ ಸ್ಟೇಷನ್‌ವೊಂದರಲ್ಲಿ ಆಟೋ ಗ್ಯಾಸ್ ಬೆಲೆ ಏರಿಕೆ ಖಂಡಿಸಿ ಪ್ರತಿಭಟನಾ ದೂರಿನ ಹಿನ್ನೆಲೆಯಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚರಿಕೆ ವಹಿಸಬೇಕು. ಗ್ಯಾಸ್ ಸ್ಟೇಷನ್‌ಗಳಲ್ಲಿ ದಾಸ್ತಾನು ಇದ್ದರೂ ನೋ ಸ್ಟಾಕ್' ಬೋರ್ಡ್ ಹಾಕಿ ಸಾರ್ವಜನಿಕರಿಗೆ ತೊಂದರೆ ನೀಡುತ್ತಿರುವ ದೂರುಗಳು ಬರದಂತೆ ನೋಡಿಕೊಳ್ಳಬೇಕು.

ಅಧಿಕಾರಿಗಳು ಅಂತಹ ಸ್ಥಳಗಳಿಗೆ ಭೇಟಿ ನೀಡಿ ದಾಸ್ತಾನು ಪರಿಶೀಲಿಸಬೇಕು ಎಂದು ನಿರ್ದೇಶನ ನೀಡಿದರು.

ಸಾರ್ವಜನಿಕರು ಅಕ್ರಮ ದಾಸ್ತಾನು ಅಥವಾ ಬೆಲೆ ಏರಿಕೆಯಂತಹ ಪ್ರಕರಣಗಳು ಕಂಡುಬಂದಲ್ಲಿ ಕೂಡಲೇ ಉಚಿತ ಸಹಾಯವಾಣಿ ಸಂಖ್ಯೆ 1070 ಕರೆ ಮಾಡಿ ಮಾಹಿತಿ ನೀಡಬಹುದು.

ಈ ಕುರಿತು ಅಧಿಕಾರಿಗಳು ನಿಗಾವಹಿ ಸಬೇಕು. ಕರೆಗಳಿಗೆ ತ್ವರಿತವಾಗಿ ಸ್ಪಂದಿ ಸಬೇಕು ಎಂದರು.

**ಏ.3 ರಿಂದ ತುಂಗಭದ್ರಾ ಎಚ್ ಎಲ್‌ಸಿ ಕಾಲುವೆಗೆ ಕುಡಿಯಲು ನೀರು ಬಿಡುಗಡೆ:**

ಕುಡಿಯುವ ನೀರಿನ ಸಮಸ್ಯೆ ನೀಗಿಸುವ ನಿಟ್ಟಿನಲ್ಲಿ ನಾಳೆಯಿಂದ ತುಂಗಭದ್ರಾ ಎಚ್‌ಎಲ್‌ಸಿ ಕಾಲುವೆಗೆ ಕುಡಿಯಲು ನೀರು ಹರಿಸಲಾಗುತ್ತದೆ. ನೀರನ್ನು ಕೇವಲ ಕುಡಿಯುವ ಉದ್ದೇಶಕ್ಕಾಗಿ ಮಾತ್ರ ಬಳಕೆಯಾಗಬೇಕು. ಯಾವುದೇ ಕಾರಣಕ್ಕೂ ಅಕ್ರಮವಾಗಿ ನೀರು ವ್ಯರ್ಥವಾಗದಂತೆ ನೋಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

ಕೃಷಿ, ಕೈಗಾರಿಕೆಗಳು ಅಥವಾ ವಾಣಿಜ್ಯ ಉದ್ದೇಶಗಳಿಗಾಗಿ ಕಾಲುವೆಯಿಂದ ಅಕ್ರಮವಾಗಿ ನೀರು ಎತ್ತುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಕಾಲುವೆ ಹಾದುಹೋಗುವ



ಮಾರ್ಗದುದ್ದಕ್ಕೂ ಪೊಲೀಸ್, ನೀರಾವರಿ ಇಲಾಖೆಯ ಅಧಿಕಾರಿಗಳು ಸಿಬ್ಬಂದಿ ಮೂಲಕ ನಿರಂತರವಾಗಿ ಬೀಟ್ ವ್ಯವಸ್ಥೆ ಕೈಗೊಳ್ಳುವ ಮೂಲಕ ನಿಗಾವಹಿಸಬೇಕು ಎಂದು ತಿಳಿಸಿದರು.

ಕುಡಿಯುವ ನೀರಿನ ಸಮರ್ಪಕ ಪೂರೈಕೆಗಾಗಿ ಅಧಿಕಾರಿಗಳು ಪಂಪಿಂಗ್ ಶೆಡ್ಯೂಲ್ ಸಿದ್ಧಪಡಿಸಿಕೊಳ್ಳಬೇಕು. ನೀರು ಬಂದ ನಂತರ ಕೆರೆ ತುಂಬಿಸಿಕೊಳ್ಳಲು ಮೋಟಾರ್ ಮತ್ತು ಪಂಪ್‌ಗಳನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳಬೇಕು.

ಮುಂಬ ರುವ ಬೇಸಿಗೆಯ ದಿನಗಳಲ್ಲಿ ನೀರಿಗೆ ತೊಂದರೆಯಾಗದಂತೆ ಕೆರೆಗಳಲ್ಲಿ ಸಂಗ್ರ ಹಣಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಅಧಿಕಾರಿಗಳಿಗೆ ಸೂಚಿಸಿದರು.

**ಏ.4 ರಂದು ವಿಶೇಷ ಸ್ವಯಂ-ಗಣತಿ' ಅಭಿಯಾನ:**

ಭಾರತದ ಜನಗಣತಿ-2027ರ ಭಾಗವಾಗಿ, ಜಿಲ್ಲೆಯಾದ್ಯಂತ ಪ್ರಥಮ ಹಂತದ ಮನೆಗಳ ಪಟ್ಟಿ ಮತ್ತು ಮನೆ ಗಣತಿ' ಪ್ರಕ್ರಿಯೆಯನ್ನು ಚುರುಕುಗೊಳಿಸಲು ಏಪ್ರಿಲ್ 4ರಂದು (ಶನಿವಾರ) ವಿಶೇಷ ಸ್ವಯಂ-ಗಣತಿ' ಅಭಿಯಾನ ಹಮ್ಮಿಕೊಳ್ಳಲಾಗಿದೆ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಹೇಳಿದರು.

ಜಿಲ್ಲೆಯ ಎಲ್ಲಾ ಸರ್ಕಾರಿ, ಅರೆ ಸರ್ಕಾರಿ, ಸ್ಥಳೀಯ ಸಂಸ್ಥೆಗಳು ಮತ್ತು ನಿಗಮ ಮಂಡಳಿಗಳ ಮುಖ್ಯಸ್ಥರು ತಮ್ಮ ಕಚೇರಿಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಕಚೇರಿಯಲ್ಲಿಯೇ ಅಂದು ಬೆಳಿಗ್ಗೆ 08 ರಿಂದ ಮಧ್ಯಾಹ್ನ 01 ಗಂಟೆಯವರೆಗೆ ಆನ್ ಲೈನ್ ವೆಬ್ ಸೈಟ್ https://se.census.gov.in ಮೂಲಕ ತಮ್ಮ ಮಾಹಿತಿಯನ್ನು ಸ್ವತಃ ದಾಖಲಿಸಬಹುದು.

ಈ ಸ್ವಯಂ- ಗಣತಿ ಪ್ರಕ್ರಿಯೆಯು ಏಪ್ರಿಲ್ 1 ರಿಂದ ಏಪ್ರಿಲ್ 15 ರವರೆಗೆ ಲಭ್ಯವಿರುತ್ತದೆ. ಅಲ್ಲದೆ, ಕಚೇರಿಗೆ ಭೇಟಿ ನೀಡುವ ಸಾರ್ವಜನಿಕರಿಗೂ ಈ ಬಗ್ಗೆ ಮಾಹಿತಿ ನೀಡಿ ಪ್ರಕ್ರಿಯೆಯಲ್ಲಿ ಭಾಗವಹಿಸಲು ತಿಳಿಸಬೇಕು.

ಈ ನಿಟ್ಟಿನಲ್ಲಿ ಜಿಲ್ಲೆಯ ಎಲ್ಲಾ ಕಚೇರಿ ಮುಖ್ಯಸ್ಥರು ಏಪ್ರಿಲ್ 4ರ ಸಂಜೆಯೊಳಗೆ ತಮ್ಮ ವ್ಯಾಪ್ತಿಯಲ್ಲಿ ನಡೆದ ಗಣತಿಯ ಕುರಿತು ದೃಢೀಕೃತ ವರದಿಯನ್ನು ಜಿಲ್ಲಾಧಿಕಾರಿಯವರ ಕಚೇರಿಗೆ ಸಲ್ಲಿಸಬೇಕು ಎಂದು ಸೂಚಿಸಿದರು.

**ಗಣಿ ಬಾಧಿತ ಪ್ರದೇಶಗಳ ಅಭಿವೃದ್ಧಿ: ಹೊಸ ಕ್ರಿಯಾ ಯೋಜನೆಗೆ ಸಿದ್ಧತೆ:**

ಜಿಲ್ಲೆಯ ಗಣಿ ಬಾಧಿತ ಪ್ರದೇಶಗಳಲ್ಲಿ ಸಮಗ್ರ ಅಭಿವೃದ್ಧಿ ಕೈಗೊಳ್ಳುವ ನಿಟ್ಟಿನಲ್ಲಿ 2023-24ನೇ ಸಾಲಿನಿಂದ ಅನ್ವಯವಾಗುವಂತೆ ಹೊಸ ಕ್ರಿಯಾ ಯೋಜನೆ ರೂಪಿಸಬೇಕಾಗಿದೆ. ಕಳೆದ ಮೂರು ವರ್ಷಗಳಿಂದ ಯಾವುದೇ ಹೊಸ ಯೋಜನೆಗಳನ್ನು ರೂಪಿಸದ ಕಾರಣ, ಪ್ರಸ್ತುತ ಸುಮಾರು 950 ಕೋಟಿ ರೂ. ಕ್ರೋಢೀಕೃತ ಅನುದಾನ ಲಭ್ಯವಿದ್ದು, ಇದನ್ನು ವಿವಿಧ ಅಭಿವೃದ್ಧಿ ಕೆಲಸಗಳಿಗೆ ಬಳಸಿಕೊಳ್ಳಲು ನಿರ್ಧರಿಸಲಾಗಿದೆ. ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಪ್ರತಿಯೊಂದು ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಬೇಕು.

ನಿಯಮಾನುಸಾರ ಪ್ರಸ್ತಾವನೆಗಳನ್ನು ಸಲ್ಲಿಸಬೇಕು ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಸೂಚಿಸಿದರು.

ಜಿಲ್ಲಾ ಖನಿಜ ಪ್ರತಿಷ್ಠಾನದ ವಿಶೇಷ ಕರ್ತವ್ಯಾಧಿಕಾರಿ ಲೋಕೇಶ್ ಅವರು ಮಾತನಾಡಿ, ಕೇಂದ್ರ ಸರ್ಕಾರದ ಹೊಸ ಮಾರ್ಗಸೂಚಿಗಳ ಅನ್ವಯ, ಈ ಯೋಜನೆಯಲ್ಲಿ ಕುಡಿಯುವ ನೀರು, ಪರಿಸರ ಸಂರಕ್ಷಣೆ, ಆರೋಗ್ಯ ಸೇವೆ, ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ವಯೋವೃದ್ಧರು ಮತ್ತು ವಿಕಲಚೇತನರ ಕಲ್ಯಾಣ, ಕೌಶಲ್ಯಾಭಿವೃದ್ಧಿ, ಸ್ವಚ್ಛತೆ ಮತ್ತು ತ್ಯಾಜ್ಯ ನಿರ್ವಹಣೆ ಹಾಗೂ ಇತರ ಮೂಲ ಸೌಕರ್ಯ ಯೋಜನೆಗಳು ಒಳಗೊಂಡತೆ ಎಂಟು ಪ್ರಮುಖ ಆದ್ಯತಾ ಕ್ಷೇತ್ರಗಳ ಮೂಲಭೂತ ಸೌಕರ್ಯಗಳ ಅನುಷ್ಠಾನಕ್ಕೆ ಪ್ರಾಮುಖ್ಯತೆ ನೀಡಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಸ್.ನವೀನ್ ಕುಮಾರ್, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕ ದೇವರಾಜ್ ಕೆ.ಆರ್, ಜಿಪಂ ಮುಖ್ಯ ಲೆಕ್ಕಾಧಿಕಾರಿ ವಿನೋದ್ ಕುಮಾರ್,

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಅಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ವರ್ಚುವಲ್ ಮೂಲಕ ತಾಲ್ಲೂಕು ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

# ಕೋಟೆಹಾಳ್: 1.30 ಕೋ.ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ನಾಗರಾಜ ಚಾಲನೆ



ಕನ್ನಡ ಮಾತೃ ಭೂಮಿ ವಾರ್ತೆ

**ಸಿರುಗುಪ್ಪ,ಏ.03-**ಕರ್ನಾಟಕ ಸರ್ಕಾರ ಜಿಲ್ಲಾ ಪಂ. ಬಳ್ಳಾರಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ 2025-26ನೇ ಸಾಲಿನ 5054 ಫ್ಲಡ್ ಅನುದಾನದ ಯೋಜನೆ ಅಡಿಯಲ್ಲಿ ಸಿರುಗುಪ್ಪ ತಾಲೂಕು ಕೋಟೆ ಹಾಳು ಗ್ರಾಮದಿಂದ ಬೆಂಚಿ ಕ್ಯಾಂಪ್ ಗ್ರಾಮದ ವರೆಗೆ ರಸ್ತೆ ಅಭಿವೃದ್ಧಿ 1.30 ಕೋಟಿ ರೂ, ವೆಚ್ಚದ ಕಾಮಗಾರಿಯನ್ನು ವಿಧಾನಸಭಾ ಕ್ಷೇತ್ರದ ಶಾಸಕ ಬಿ ಎಂ ನಾಗರಾಜ ನೆರವೇರಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ರಾಜ್ ಎಇಇ ತಿಪ್ಪೆಸ್ವಾಮಿ, ಮುಖಂಡ ರೈತ ಸೊಸೈಟಿಯ ಅಧ್ಯಕ್ಷರು ನಾಂಚರಯ್ಯ, ಚೊಕ್ಕ ಪಾಲಾಕ್ಷಗೌಡ, ರಾಮಚಂದ್ರಪ್ಪ,ಗ್ರಾ.ಪಂ. ಅಧ್ಯಕ್ಷರು ನಾಗೇಂದ್ರ, ಉಪಾಧ್ಯಕ್ಷ ಭೀಮನಗೌಡ, ಮಲ್ಲಯ್ಯ, ಸಿದ್ದಯ್ಯ, ಲಿಂಗಪ್ಪ, ಮುದುಕಪ್ಪ, ಮುದಿಯಪ್ಪ, ಭಂಡ್ರಾಳ್ ಭೀಮಣ್ಣ, ರಾಮಕೃಷ್ಣ, ಬಿ.ವೆಂಕಟೇಶ್, ಹೆಚ್. ಗಣೇಶ್, ಗೋಪಾಲಪ್ಪ, ಅನ್ಸಾರಿ ಇಸಾಕ್, ಪವನ್ ಮತ್ತಿತರರು ಪಾಲ್ಗೊಂಡಿದ್ದರು.

# ಕಸಾಪ: ಮುಖಂಡ ಸೈಯದ್ ಇಕ್ಬಾಲ್ ಅಹ್ಮದ್ ಸ್ಮರಣಾರ್ಥ ದತ್ತಿ ದೇಣಿಗೆ

ಕನ್ನಡ ಮಾತೃ ಭೂಮಿ ವಾರ್ತೆ

**ಮಾನ್ವಿ,ಏ.03-**ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡರಾಗಿದ್ದ ದಿವಂಗತ ಸೈಯದ್ ಇಕ್ಬಾಲ್ ಅಹ್ಮದ್ ಸ್ಮರಣಾರ್ಥ ಪಟ್ಟಣದ ಬಾಷುಮಿಯಾ ಸಾಹುಕಾರ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಸೈಯದ್ ಮುಜೀಬ್ ಅಹ್ಮದ್ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ದತ್ತಿ ನಿಧಿಗೆ ರೂ.25ಸಾವಿರ ದೇಣಿಗೆಯನ್ನು ಬುಧವಾರ ನೀಡಿದರು.

ಪಟ್ಟಣದ ಗ್ಯಾಲಕ್ಸಿ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ದತ್ತಿನಿಧಿ ದೇಣಿಗೆ ರೂ.25ಸಾವಿರ ಮೊತ್ತದ ಡಿಡಿ ಸ್ವೀಕರಿಸಿ ಮಾತನಾಡಿದ ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಘಟಕದ ಅಧ್ಯಕ್ಷ ಶರಣಬಸವ ನೀರಮಾನ್ವಿ,

ಪ್ರಾಧ್ಯಾಪಕ ಸೈಯದ್ ಮುಜೀಬ್ ಅಹ್ಮದ್ ಅವರು ತಮ್ಮ ಚಿಕ್ಕಪ್ಪ ಸೈಯದ್ ಇಕ್ಬಾಲ್ ಅಹ್ಮದ್ ನೆನಪಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ದತ್ತಿ ಸ್ಥಾಪಿಸಿರುವುದು ಶ್ಲಾಘನೀಯ. ರಾಜಕೀಯ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ದಶಕಗಳಿಂದ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಸೈಯದ್ ಇಕ್ಬಾಲ್



ಅಹ್ಮದ್ ಜಾತ್ಯತೀತ ಮನೋಭಾವದ ಹಾಗೂ ಸಂಕಷ್ಟದ ಲ್ಲಿರುವ ಬಡವರಿಗೆ ಸಹಾಯ ಹಸ್ತ ಚಾಚುವ ಒಳ್ಳೆಯ ವ್ಯಕ್ತಿಯಾಗಿದ್ದರು. ಸಾಹಿತ್ಯ ಪರಿಷತ್ತಿನ ವತಿಯಿಂದ ಪ್ರತಿ ವರ್ಷ ಸೈಯದ್ ಇಕ್ಬಾಲ್ ಅಹ್ಮದ್ ಸ್ಮರಣಾರ್ಥ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಹಮ್ಮಿಕೊಳ್ಳಲಾಗುವುದು' ಎಂದು ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಪರವಾಗಿ ದತ್ತಿ ದಾನಿ ಡಾ.ಸೈಯದ್ ಮುಜೀಬ್ ಅಹ್ಮದ್ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.ಸೈಯದ್ ಇಕ್ಬಾಲ್ ಅಹ್ಮದ್ ಅವರ ಸಹೋದರ ಸೈಯದ್ ಹುಸೇನ್ ಸಾಹೇಬ್,

ಕಸಾಪ ಕೋಶಾಧ್ಯಕ್ಷ ಎಚ್.ಶರ್ಫುದ್ದೀನ್ ಪೋತ್ನಾಳ, ಗೌರವ ಕಾರ್ಯದರ್ಶಿ ಲಕ್ಷ್ಮಣ ಜಾನೇಕಲ್, ಡಿಎಸ್‌ಎಸ್ ಮುಖಂಡ ಚನ್ನಬಸವ ಮಾಡಗಿರಿ ಮಾತನಾಡಿ, ಸೈಯದ್ ಇಕ್ಬಾಲ್ ಅಹ್ಮದ್ ಅವರ ವ್ಯಕ್ತಿತ್ವವನ್ನು ಸ್ಮರಿಸಿದರು.

ಈ ಸಂದರ್ಭದಲ್ಲಿ ಪ್ರಾಧ್ಯಾಪಕರಾದ ಸೈಯದ್ ಮಿನಾಜುಲ್ ಹಸನ್, ಚಂದ್ರು ಎನ್.ಹೊಸೂರು, ಚನ್ನಬಸವ ಮಾಡಗಿರಿ, ಬಸವರಾಜ ಸುಂಕೇಶ್ವರ, ,ಬಿಲಾಲ್, ಎಚ್.ಚಂದ್ರಶೇಖರ, ಗೋಪಾಲ, ಶಿಕ್ಷಕ ಸಬ್ಜಲಿ, ರೆಹಮತ್ ಅಲಿ, ಮುದಾಸ್ಸಿರ್ ಅಲಿ, ರಾಮು ಹೊಳೆಪ್ಪನವರ, ರಾಜೆ ಸಾಬ್ ಹಾಗೂ ಸೈಯದ್ ಇಕ್ಬಾಲ್ ಅಹ್ಮದ್ ಕುಟುಂಬದ ಸದಸ್ಯರು ಉಪಸ್ಥಿತರಿದ್ದರು.

# ಧಾರ್ಮಿಕ ಆಚರಣೆಯಿಂದ ಸಮಾಜದ ಸಂಘಟನೆಗೆ ಪೂರಕ- ಮುರಳೀಧರ್ ಕುಲಕರ್ಣಿ

ಕನ್ನಡ ಮಾತೃ ಭೂಮಿ ವಾರ್ತೆ

**ಗಂಗಾವತಿ,ಏ.03-**ಸಮಾಜದ ಸಂಘಟನೆಗೆ ಧಾರ್ಮಿಕ ಆಚರಣೆಗಳು ಅತ್ಯಂತ ಮಹತ್ವದ ಆಗಿದೆ ಎಂದು ಶ್ರೀ ಯೋಗಿಶ್ವರ ಯಜ್ಞ ವಲ್ಕ ಸೇವಾ ಟ್ರಸ್ಟಿನ ಅಧ್ಯಕ್ಷ ಮುರಳಿದರ ಕುಲಕರ್ಣಿ ಹೇಳಿದರು ಅವರು ಟ್ರಸ್ಟ್ ನೇತೃತ್ವದ ಗುರುವಾರದಂದು ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಹನುಮ ಜಯಂತಿ ಆಚರಣೆಯಲ್ಲಿ ಸೂಕ್ತ ಹವನ ಪೂರ್ಣಾಹುತಿಯನ್ನು ನೆರವೇರಿಸಿ ಮಾತನಾಡಿದರು.

ಹಾಲು ದಶಕಗಳಿಂದ ದೇವಸ್ಥಾನದಲ್ಲಿ ಪ್ರತಿ ವರ್ಷ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸುತ್ತಾ ಬರಲಾಗಿದ್ದು ಮುಂದಿನ ದಿನಗಳಲ್ಲಿ ದೇವಸ್ಥಾನದ ಜೀರ್ಣೋದ್ದರಕ್ಕೆ ಆಸ್ತಿಕ ಬಂಧುಗಳು ಸಹಕಾರ ನೀಡುವಂತೆ ಕೋರಿದರು. ಈ ಸಂದರ್ಭದಲ್ಲಿ, ಆಂಜನೇಯ ಸ್ವಾಮಿಗೆ ಪಂಚಾಮೃತ ಅಭಿಷೇಕ ವಾಯುಸ್ತುತಿ ಪಾರಾಯಣ ಸೇರಿದಂತೆ ಬೇವಿನಹಾಳ ಪ್ರಹ್ಲಾದ ಆಚಾರ್ , ಪ್ರವಚನ ಮಹಿಳೆಯರಿಂದ ಭಜನೆ ಇತರೆ ಧಾರ್ಮಿಕ ಪೂಜಾ ಕಾರ್ಯ ಕ್ರಮಗಳನ್ನು ಪ್ರದೀಪ್ ಆಚಾರ. ನೇ ರ ವೇರಿಸಿದರು. ಸೇವಾ ಕಾರ್ಯಕರ್ತರಾದ ರೇಣುಕಾ ದಂಪತಿಗಳು ಶ್ರೀನಿವಾಸ್ ಕುಲಕರ್ಣಿ ಆನಂದ ಕೆಇಬಿ ರಾಘ ವೇಂದ್ರ, ಮೇಗೂರು. ಸೇರಿ ದಂತೆ ಅಪಾರ. ಭಕ್ತಾದಿಗಳು ಪಾಲ್ಗೊಂಡಿದ್ದರು.



# ಬಿಜೆಎಂ ಚಲನ ಚಿತ್ರಕ್ಕೆ ಚಾಲನೆ : ಮದುವೆ ಮಹತ್ವ ಸಾರುವ ಈ ಕಥಾವಸ್ತುವೆ ಹೀರೋ- ರಮೇಶ್

ಕನ್ನಡ ಮಾತೃ ಭೂಮಿ ವಾರ್ತೆ

**ಬಳ್ಳಾರಿ,ಏ.03-**ರಾಮಾಯಣ ಕಾಲ ಘಟ್ಟಗಳ ಕೆಲ ಅಂಶಗಳೊಂದಿಗೆ ಲಿವ್ ಇನ್ ಟುಗೇ ದರ್ ದುಷ್ಪರಿಣಾಮಗಳು ಸಂಪ್ರದಾಯ ಮದವೆಯ ಮಹತ್ವ ಸಾರುವ ಬಿಜೆಎಂ (ಬ್ಯಾಗ್ರೌಂಡ್ ಮ್ಯಾರೇಜ್) ಈ ಚಲನ ಚಿತ್ರದ ಕಥಾವಸ್ತುವೆ ಹೀರೋ ಎಂದು ಚೊಚ್ಚಲ ಚಿತ್ರ ನಿರ್ದೇಶಿಸುತ್ತಿರುವ ಬಳ್ಳಾರಿ ರಮೇಶ್ ಭೀಮರಾಯಪ್ಪ ತಿಳಿಸಿದರು.

ಅವರು ನಗರದ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಈ ಚಿತ್ರಕಥೆಗೆ ಕೆಜಿಎಫ್ ಖ್ಯಾತಿಯ ಕಿನ್ನಾಳ್‌ರಾಜ್ ಅವರು ಸಂಭಾಷಣೆ ಮತ್ತು ಹಾಡು ರಚಿಸಿದ್ದು ನಮಗೆ ಬೆನ್ನೆಲುಬಾಗಿ ನಿಂತಿದ್ದಾರೆ, ಸಂಗೀತ ಆಕಾಶ್ ಪರ್ವ ನೀಡುತ್ತಿದ್ದು, ಛಾಯಗ್ರಹಣ ಸುವೀಶ್ ನೀಡಲಾಗುತ್ತಿದ್ದು, ಶ್ರೀಚಕ್ರ ಫಿಲಮ್ಸ್ ಪ್ರೊಡೆಕ್ಷನ್‌ನಲ್ಲಿ ಚಿತ್ರ ನಿರ್ಮಾಣಗೊಳ್ಳಲಿದೆ, ಅನೇಕ ಚಿತ್ರಗಳಲ್ಲಿ ಸಹ ನಿರ್ದೇಶಕರಾಗಿ ಕಾರ್ಯನಿರ್ವಹಿಸಿರುವ ಅನುಭವಿ ನಟ ಮಲ್ಲಿಕಾರ್ಜುನ ಕ್ಯಾದಿಗುಪ್ಪ ಹಾಗು ದಿನೇಶ್ ಹೆಚ್,ಡಿ.ಕೋಟೆ ನಾಯಕ ನಟರಾಗಿ ಅಭಿನಯಿಸುತ್ತಿದ್ದು, ನಾಯಕಿಯಾಗಿ ಪೂಜಾ ಕೊಟ್ಟೂರ್ ಇವರು ನಟಿಸಲಿದ್ದಾರೆ ತ್ರಿಕೋನ ಪ್ರೇಮ ಕಥೆ ಇದಾಗಿದೆ ಎಂದರು.



ಸಂಪ್ರದಾಯ ಪದ್ಧತಿಗಳ ಮದುವೆ ಕಟ್ಟುಪಾಡುಗಳು, ಲಿವ್‌ಇನ್ ಟುಗೇದರ್ ಇತರೆ ನೂತನ ವ್ಯವಸ್ಥೆಗಳು ಪರಿಣಾಮಕಾರಿಯಾಗಿರುವುದಿಲ್ಲ, ಬಹುತೇಕ ಲವ್ ಮ್ಯಾರೇಜ್, ಲಿವ್ ಇನ್ ಟುಗೇದರ್ ಮದುವೆಗಳು ಮುರಿದು ಬಿದ್ದ ಉದಾಹರಣೆಗಳಿದ್ದು, ಸಂಪ್ರದಾಯ ಬದ್ದ ಮದುವೆಗಳು ಡಿವೋರ್ಸ್ ಇತರೆ ತೊಂದರೆಗಳು ಕಡಿಮೆ ಆಗಿದ್ದು ಚಿತ್ರವು ನೋಡುಗರನ್ನು ಒಂದೇ ಉಸಿರಿನಲ್ಲಿ ನೋಡಿಸಿಕೊಂಡು ಹೋಗುತ್ತಿದ್ದು, ಬೆಂಗಳೂರು ಬಳ್ಳಾರಿ ಹಾಗು ಇತರೆ ಭಾಗಗಳಲ್ಲಿ ಚಿತ್ರೀಕರಣ ನಡೆಯಲಿದ್ದು ತಿಂಗಳೊಳಗೆ ಸಂಪೂರ್ಣ ಚಿತ್ರೀಕರಣ ಮಾಡಲಿದ್ದೇವೆ ಅನೇಕ ಪ್ರತಿಭಾವಂತ ಹೊಸ ಮುಖಗಳಿಗೆ ಅವಕಾಶ ಕಲ್ಪಿಸಲಿದ್ದೇವೆ ಎಂದು ವಿವರಿಸಿದರು.

ಕೆಜಿಎಫ್ ಲಿರಿಕ್ಸ್ ಖ್ಯಾತಿಯ ಕಿನ್ನಾಳ್ ರಾಜ್ ಅವರು ಮಾತನಾಡಿ, ಕಥೆ ತುಂಬಾ ಚೆನ್ನಾಗಿದೆ ನಿರ್ದೇಶಕ ರಮೇಶ್ ಅವರು ಈ ಚಿತ್ರದ ಮೂಲಕ ಯಾಕ್ಷನ್ ಕಟ್ ಹೇಳುತ್ತಿದ್ದು, ಜನರನ್ನು ಹಿಡಿದಿಡುವ ಶಕ್ತಿ ಕಥೆಗಿದೆ, ಇದುವರೆಗು ಸುಮಾರು 200 ಹಾಡು ಬರೆದಿದ್ದು ಈ ಚಿತ್ರಕ್ಕೆ ಸಂಭಾಷಣೆ ಹಾಗು ಹಾಡುಗಳನ್ನು ನಾನೆ ರಚಿಸುತ್ತಿದ್ದು ಚಿತ್ರೀಕರಣ ದುದ್ದಕ್ಕೂ ಜೊತೆಯಾಗಿರುವೆ ಎಂದು ತಿಳಿಸಿದರು.ಈ ಸಂದರ್ಭದಲ್ಲಿ ನಾಯಕ ನಟ ರಾದ ಮಲ್ಲಿಕಾರ್ಜುನ್ ಕ್ಯಾದಿಗುಪ್ಪ, ದಿನೇಶ್ ಹೆಚ್.ಡಿ.ಕೋಟೆ ಹಾಗು ನಾಯಕಿ ಪೂಜಾ ಕೊಟ್ಟೂರು, ಛಾಯ ಗ್ರಾಹಕ ಸುವೇಶ್ ಇದ್ದರು.

ನಂತರ ಕನಕದುರ್ಗಾದೇವಿ ದೇವಸ್ಥಾನದಲ್ಲಿ ಚಿತ್ರೀಕರಣಕ್ಕೆ ದೇವಸ್ಥಾನದ ಗಾದೆಪ್ಪ ಬಳ್ಳಾರಿ ಇವರು ಚಾಲನೆ ನೀಡಿದರು.

# ಮಂತ್ರಾಲಯ ರಾಯರ ಮಠದ ಹುಂಡಿ ಎಣಿಕೆ ಮುಕ್ತಾಯ 21 ದಿನದಲ್ಲಿ 2.48 ಕೋಟಿ ರೂ. ಕಾಣಿಕೆ ಸಂಗ್ರಹ



ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.03-**ಕಲಿಯುಗ ಕಾಮಧೇನು ಮಂತ್ರಾಲಯ ರಾಘವೇಂದ್ರ ಸ್ವಾಮಿ ಮಠದ ಮಾರ್ಚ್ ತಿಂಗಳಿನ 21 ದಿನದ ಕಾಣಿಕೆ ಹುಂಡಿ ಎಣಿಕೆ ಮುಕ್ತಾಯವಾಗಿದ್ದು, ಕಳೆದ 21 ದಿನದಲ್ಲಿ 2,48,28,737 ರೂ. ಕಾಣಿಕೆ ಸಂಗ್ರಹವಾಗಿದೆ.

ಗುರುರಾಘವೇಂದ್ರ ಸ್ವಾಮಿ ಮಠಕ್ಕೆ ಮಾರ್ಚ್ ತಿಂಗಳಿನ ಈ 21 ದಿನಗಳಲ್ಲಿ ಕೋಟ್ಯಂತರ ರೂ. ಕಾಣಿಕೆ ಹರಿದು ಬಂದಿದ್ದು, ಸಂಗ್ರಹವಾದ ಕಾಣಿಕೆಯಲ್ಲಿ 2,39,26,137 ರೂ. ಕರೆನ್ಸಿ ನೋಟುಗಳು. 9,2,600 ರೂ. ನಾಣ್ಯಗಳು ಸಂಗ್ರಹವಾಗಿವೆ. 14 ಗ್ರಾಂ ಚಿನ್ನ, 2,163 ಗ್ರಾಂ ಬೆಳ್ಳಿಯನ್ನ ಕಾಣಿಕೆ ರೂಪದಲ್ಲಿ ಭಕ್ತರು ನೀಡಿದ್ದಾರೆ.

ಮಂತ್ರಾಲಯ ರಾಯರ ಮಠದಲ್ಲಿ ನಡೆಸಲಾದ ಹುಂಡಿ ಎಣಿಕೆ ಕಾರ್ಯ ಮಂಗಳವಾರ ರಾತ್ರಿ ಮುಕ್ತಾಯವಾಗಿದ್ದು, ಎಣಿಕೆ ಕಾರ್ಯದಲ್ಲಿ ಮಠದ ನೂರಾರು ಸಿಬ್ಬಂದಿ, ಭಜನಾ ಮಂಡಳಿ ಭಕ್ತರು, ಕರ ಸೇವಕರು ಭಾಗವಹಿಸಿದ್ದರು.

# ಪ್ರಥಮ ದರ್ಜೆ ಕಾಲೇಜ್ ನಲ್ಲಿ ಚಿಕ್ಕ ಸೊಸೆ ನಾಟಕ : ವಿದ್ಯಾರ್ಥಿಗಳಿಂದ ಸಂವಾದ

ಕನ್ನಡ ಮಾತೃ ಭೂಮಿ ವಾರ್ತೆ



**ಮುದಗಲ್,ಏ.03-**ಪಟ್ಟಣದ ಮಸ್ಕಿ ರಸ್ತೆಯಲ್ಲಿ ಇರುವ ಪದ್ಮಾವತಿ ಬಾಯಿ ರಾಘವೇಂದ್ರರಾವ್ ದೇಶಪಾಂಡೆ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕವಿ ಪಿ.ಬಿ ಧುತ್ತರಗಿ ರಚಿತ ಚಿಕ್ಕ ಸೊಸೆ ನಾಟಕ ಕೃತಿ ಪರಿಚಯದಿಂದ ವಿದ್ಯಾರ್ಥಿಗಳ ಓದು- ಅಭಿಪ್ರಾಯ- ಸಂವಾದ ಕಾರ್ಯಕ್ರಮ ಸಸಿಗೆ ನೀರು ಹಾಕುವ ಮೂಲಕ ಗುರುವಾರ ಉದ್ಘಾಟಿಸಿದರು.

ರಂಗಗೀತೆ ಮೂಲಕ ಇತಿಹಾಸ ವಿಭಾಗದ ಮುಖ್ಯಸ್ಥ ಭೀಮಶಂಕರ ಕಾರ್ಯಕ್ರಮದ ಉದ್ಘಾಟನೆ ಮಾಡಿದ ಬಳಿಕ ಮಾತನಾಡಿದ ಅವರು ಸಾಮಾನ್ಯವಾಗಿ ಅತ್ತೆ ಮತ್ತು ಸೊಸೆಯ ನಡುವಿನ ಮನಸ್ತಾಪದ ಕಲಹಗಳು ಬಹುತೇಕರ ಮನೆಯಲ್ಲಿ ಬಗೆಹರಿಸದ ಸಮಸ್ಯೆಯಾಗಿದೆ. ಇದರಲ್ಲಿ ಮುಖ್ಯವಾಗಿ ಹೊಂದಾಣಿಕೆ ಕಾರಣವಾಗಿದೆ. ಅತ್ತೆ ಸೊಸೆ ಸಂಬಂಧ ಅತ್ಯಂತ ಸೂಕ್ಷ್ಮವಾದದ್ದು. ಇವರಿಬ್ಬರಲ್ಲಿ ಭಿನ್ನಾಭಿಪ್ರಾಯ ಬಂದರೆ ಮನೆಯಲ್ಲಿ ಅಶಾಂತಿಯಾಗುವದು. ಸಾಮಾನ್ಯವಾಗಿ ಒಟ್ಟಿಗೆ ಇರುವುದಿಲ್ಲ. ಸೊಸೆಯನ್ನು ಶೋಷಣೆ ಮಾಡುವುದು ಹಿರಿತನದ ಹೆಗ್ಗಳಿಕೆಯೆಂದು ಭಾವಿಸುವ ಅತ್ತೆಯಾಗಲಿ ಕಾಣುವುದು ವಿರಳವಾಗಿದೆ ಹೀಗಾಗಿ ಮುಂಬರುವ ದಿನಗಳಲ್ಲಿ ತಾವೆಲ್ಲರೂ ಪ್ರತಿಯೊಬ್ಬರು ಮನೆಯ ಗ್ರಹಣಿ ಯಾಗುತ್ತಿರಿ ಇದಿನಿಂದಲೇ ನಾವು ಸಂಸ್ಕಾರವಂತರಾಗಿ, ಪರಸ್ಪರ ಒಬ್ಬರಿಗೊಬ್ಬರು ಗೌರವ ನೀಡುತ್ತಾ ಸಹ ಬಾಳ್ವೆಯಾ ಜೀವನ ಹಾದಿ ಹಿಡಿಯಬೇಕೆಂದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕನ್ನಡ ವಿಭಾಗ ಮುಖ್ಯಸ್ಥ ದೊಡ್ಡಬಸಪ್ಪ ಹುಡೆದಗಡ್ಡಿ ಚಿಕ್ಕ ಸೊಸೆ ಕೃತಿ ಪುಸ್ತಕ ಪರಿಚಯ ಮಾಡಿಸಿದರು.

ಸಂಚಾಲಕ ಹಾಗೂ ಉಪನ್ಯಾಸಕ ಎಂ.ಡಿ ಚಿತ್ತರಗಿ ಪ್ರಾಸ್ತವಿಕ ನುಡಿ ಮಾತನಾಡಿದರು.

ಕಾಲೇಜು ವಿದ್ಯಾರ್ಥಿಗಳಿಗೆ ಕೃತಿ ಪರಿಚಯದಿಂದ ವಿದ್ಯಾರ್ಥಿಗಳ ಓದು- ಅಭಿಪ್ರಾಯ-ಸಂವಾದ ಜರುಗಿತು.

ಕಾರ್ಯಕ್ರಮದ ಅಧ್ಯಕ್ಷತೆ ಪಿಬಿ ದತ್ತರಗಿ ಟ್ರಸ್ಟ್ ಸೂಳೇಬಾವಿ ( ಬಾಗಲಕೋಟೆ ) ಎಸ್ಕೆ ಕೊನೆ ಸಾಗರ್ ವಹಿಸಿದ್ದರು. ಈ ಸಂದರ್ಭದಲ್ಲಿ ಸಿದ್ದಲಿಂಗಪ್ಪ ಬೀಳಗಿ, ಸುನಂದ ಕಂದಗಲ್, ಉಪನ್ಯಾಸಕರು ಡಾ. ರವಿಶಂಕರ್ ಉಪನ್ಯಾಸಕರು ಏಜಾಜ್ ಕಿಲ್ಲಾ, ನಾಗರಾಜ, ಭವ್ಯ ಯುಪಿ, ಕಾಲೇಜ್ ಸಿಬ್ಬಂದಿಗಳ , ಅಯ್ಯಪ್ಪ, ಮರಿಯಪ್ಪ ಸೇರಿದಂತೆ ಕಾಲೇಜು ವಿದ್ಯಾರ್ಥಿಗಳು ಇದ್ದರು.

# ಗಣತಿ ಕಾರ್ಯ ಸಂಪೂರ್ಣ ಡಿಜಿಟಲ್ - ಅಮರೇಶ ಬಿರಾದರ್

ಕನ್ನಡ ಮಾತೃ ಭೂಮಿ ವಾರ್ತೆ



**ಅರಕೇರಾ,ಏ.03-**ಈ ಬಾರಿ ಜನಗಣತಿ ಪ್ರಕ್ರಿಯೆ ಸಂಪೂರ್ಣ ಡಿಜಿಟಲ್ ರೂಪದಲ್ಲಿ ಎರಡು ಹಂತಗಳಲ್ಲಿ ನಡೆಯಲಿದೆ. ತಾಲೂಕು ಆಡಳಿತದಿಂದ ಪೂರ್ಣ ಸಿದ್ಧತೆ ಕೈಗೊಳ್ಳ ಲಾಗಿದೆ ಎಂದು ತಹಸೀಲ್ದಾರ್ ಅಮರೇಶ ಬಿರಾದರ್ ತಿಳಿಸಿದರು.

ಏ.1 ರಿಂದ ಸೆ.30 ರವರೆಗೆ ಮೊದಲ ಹಂತದ ಮನೆಪಟ್ಟಿ ಹಾಗೂ ವಸತಿ ಗಣತಿ ನಡೆಯಲಿದೆ. 2027 ರ ಫೆ.9 ರಿಂದ 28 ರವರೆಗೆ ಎರಡನೇ ಹಂತದ ಜನಸಂಖ್ಯಾ ಗಣತಿ ನಡೆಯಲಿದೆ. ಇದೇ ಏ.15ರವರೆಗೆ ಸಾರ್ವಜನಿಕರು ಸ್ವಯಂ ಜನಗಣತಿ ಆಪ್ ಅಥವಾ ಪೋರ್ಟಲ್ k||t://h.ehqO. Ãsñ.q ಮೂಲಕ ತಮ್ಮ ಮಾಹಿತಿಯನ್ನು ದಾಖಲಿಸಿಕೊಳ್ಳಬಹುದು. ಬಳಿಕ ಗಣತಿದಾರರು ಮನೆ ಮನೆಗೆ ತೆರಳಿ ಮಾಹಿತಿ ಸಂಗ್ರಹಿಸಲಿದ್ದಾರೆ ಎಂದರು.

ತಾಲೂಕಿನಲ್ಲಿ ಗಣತಿದಾರರು ಹಾಗೂ ಮೇಲ್ವಿಚಾರಕರನ್ನು ನೇಮಕ ಮಾಡಲಾಗಿದೆ. ಅರಕೇರಾ ಸರಕಾರಿ ಬಾಲಕರ ಪ್ರೌಢ ಶಾಲೆಯಲ್ಲಿ ತರಬೇತಿ ಕಾರ್ಯ ಹಮ್ಮಿಕೊಳ್ಳಲಾಗಿದೆ. ಮನೆಗಳ ಮೂಲ ಸೌಕರ್ಯ ಹಾಗೂ ವೈಯಕ್ತಿಕ ಮಾಹಿತಿಗಳನ್ನು ಎರಡು ಹಂತಗಳಲ್ಲಿ ಸಂಗ್ರಹಿಸಲಾಗುತ್ತದೆ. ಸಾರ್ವಜನಿಕರು ನಿಖರವಾದ ಮಾಹಿತಿ ನೀಡಿ ಜನಗಣತಿಗೆ ಸಹಕರಿಸಬೇಕು ಎಂದು ತಹಸೀಲ್ದಾರ್ ಅಮರೇಶ ಬಿರಾದರ್ ಮನವಿ ಮಾಡಿದ್ದಾರೆ.

# ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗಾಗಿ ನಾಳೆ ಸುಧಾ ಜೀನೀಸ್ ಹಂಟ್ ವಿಶೇಷ ಪ್ರತಿಭಾ ಪರೀಕ್ಷೆ - ಬಾಲಪ್ಪ ಹಿರೇಮನಿ

ಕನ್ನಡ ಮಾತೃ ಭೂಮಿ ವಾರ್ತೆ



**ಲಿಂಗಸಗೂರ,ಎ.03-** ಡಾ. ಸುಧಾ ಮೂರ್ತಿ ಇನ್ಫೋ ಪದವಿ ಪೂರ್ವ ಕಾಲೇಜ್ ಲಿಂಗಸಗೂರು ಇವರಿಂದ ಎಸ್‌ಎಸ್‌ಎಲ್‌ಸಿ ಅಧ್ಯಯನ ಮಾಡುತ್ತಿರುವ ಕನ್ನಡ ಮತ್ತು ಆಂಗ್ಲ ಮಾಧ್ಯಮ ವಿದ್ಯಾರ್ಥಿಗಳ ಪ್ರತಿಭೆಯನ್ನು ಉತ್ತೇಜಿಸಲು ಏ.4 ರಂದು ಶನಿವಾರ ಬೆಳಗ್ಗೆ 10 ಗಂಟೆಗೆ ಸುಧಾ ಜೀನಿಸ್ ಹಂಟ್ 2026- ವಿಶೇಷ ಪ್ರತಿಭಾ ಪರೀಕ್ಷೆಯನ್ನು ಆಯೋಜಿಸಲಾಗಿದೆ ಎಂದು ಸುಧಾ ಮೂರ್ತಿ ಕಾಲೇಜಿನ ಪ್ರಾಚಾರ್ಯ ಬಾಲಪ್ಪ ಹಿರೇಮನಿ ತಿಳಿಸಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿರುವ ಈ ವಿಶೇಷ ಪ್ರತಿಭಾ ಪರೀಕ್ಷೆಯು ಡಾ. ಸುಧಾ ಮೂರ್ತಿ ಇನ್ಫೋ ಪದವಿ ಪೂರ್ವ ಕಾಲೇಜ್, ಅನ್ನದಾನಗೌಡ ಆಸ್ಪತ್ರೆ ಹತ್ತಿರ ಎಂ ಎನ್ ಆರ್ ಬಿಲ್ಡಿಂಗ್ ರಾಯಚೂರು ಬೈಪಾಸ್ ರಸ್ತೆ ಲಿಂಗಸ ಗೂರನ ಪರೀಕ್ಷಾ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದೆ.

ವಿದ್ಯಾರ್ಥಿಗಳಲ್ಲಿ ಅಡಗಿರುವ ಪ್ರತಿಭೆಯನ್ನು ಗುರುತಿಸಿ ಅವರನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಈ ಪರೀಕ್ಷೆಯನ್ನು ಹಮ್ಮಿಕೊಳ್ಳಲಾಗಿದ್ದು ಈ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಆಕರ್ಷಕ ನಗದು ಬಹುಮಾನಗಳನ್ನು ನೀಡಲಾಗುತ್ತದೆ. ಈ ಪರೀಕ್ಷೆಯಲ್ಲಿ ಪ್ರಥಮ ಬಹುಮಾನವಾಗಿ 20 ಸಾವಿರ ರೂಪಾಯಿಗಳು, ಹಾಗೂ ದ್ವಿತೀಯ ಬಹುಮಾನ 10 ಸಾವಿರ ರೂಪಾಯಿಗಳು,ಮತ್ತು ತೃತೀಯ ಬಹುಮಾನವಾಗಿ 5 ಸಾವಿರ ರೂಪಾಯಿಗಳನ್ನು ನೀಡಲಾಗುವುದು.

ಈ ಪರೀಕ್ಷೆಯಲ್ಲಿ ಪಾಲ್ಗೊಂಡು ಬಹುಮಾನ ಪಡೆಯದ ಎಲ್ಲಾ ವಿದ್ಯಾರ್ಥಿಗಳಿಗೆ ವಿಶೇಷ ಶುಲ್ಕ ವಿನಾಯಿತಿಯನ್ನು ನೀಡಲಾಗುವುದು. ಸ್ಟೇಟ್ ಸಿಬಿಎಸ್‌ಇ, ಐಸಿಎಸ್ ಬೋರ್ಡ್ ಹಂತದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪ್ರತಿಶತ ಶೇ 95 ರಷ್ಟು ಅಂಕ ಪಡೆದಿರುವ ಜಿಲ್ಲೆಯ 10 ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡಲಾಗುವುದು.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಬರೆಯುತ್ತಿರುವ ಮಾಜಿ ಸೈನಿಕರ ಮಕ್ಕಳಿಗೆ, ಪತ್ರಿಕೋದ್ಯಮದಲ್ಲಿ ಸೇವೆ ಸಲ್ಲಿಸುವವವರ ಮಕ್ಕಳಿಗೆ ಕಾಲೇಜಿನ ಒಟ್ಟು ಪ್ರವೇಶಾತಿಯಲ್ಲಿ ಪ್ರತಿಶತ ಶೇ 10 ಸೀಟುಗಳನ್ನು ಶುಲ್ಕ ವಿನಾಯಿತಿ ಮೂಲಕ ಪ್ರವೇಶಾತಿಗೆ ಮೀಸಲಿಡಲಾಗಿದೆ. ನಮ್ಮ ಕಾಲೇಜಿನಲ್ಲಿ 2026-27 ನೇ ಸಾಲಿನ ಪ್ರವೇಶಾತಿಗಳು ಪ್ರಾರಂಭಗೊಂಡಿದ್ದು ನುರಿತ ಆಂಧ್ರಪ್ರದೇಶ, ಹೈದರಾಬಾದ್, ಕರ್ನಾಟಕದ ಉಪನ್ಯಾಸಕರಿಂದ ವೈದ್ಯಕೀಯ, ಇಂಜಿನಿಯರಿಂಗ್, ಅಗ್ರಿಕಲ್ಚರ್ ಸೇರಿದಂತೆ ಇನ್ನು ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ವಿಶೇಷ ಬೋಧಕ ಸಿಬ್ಬಂದಿಗಳನ್ನು ಹೊಂದಿರುತ್ತದೆ.


ಈ ಎಲ್ಲಾ ಸ್ಟೇಟ್ ಸಿಬಿಎಸ್‌ಇ, ಐಸಿಎಸ್‌ಇ ಬೋರ್ಡ್ ಹಂತದಲ್ಲಿ ಎಸ್‌ಎಸ್‌ಎಲ್‌ಸಿ ಅಧ್ಯಯನ ಮಾಡುತ್ತಿರುವ ಕನ್ನಡ ಮತ್ತು ಆಂಗ್ಲ ಮಾಧ್ಯಮ ವಿದ್ಯಾರ್ಥಿಗಳು ಈ ಪ್ರತಿಭಾ ಪರೀಕ್ಷೆಯಲ್ಲಿ ಭಾಗವಹಿಸಿ ತಮ್ಮ ಪ್ರತಿಭೆಯನ್ನು ತೋರಿಸಬೇಕಾಗಿದೆ. ಈಗಾಗಲೇ ಹಲವಾರು ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಪಾಲ್ಗೊಳ್ಳಲು ತಮ್ಮ ಹೆಸರನ್ನು ನೋಂದಾಯಿಸಿಕೊಂಡಿದ್ದು ಕಾರಣಾಂತರಗಳಿಂದ ನೊಂದಣಿ ಮಾಡಿಸದೆ ಇರುವ ಆಸಕ್ತ ವಿದ್ಯಾರ್ಥಿಗಳು ನೇರವಾಗಿ ಪರೀಕ್ಷೆ ದಿನದಂದು ಪರೀಕ್ಷಾ ಕೇಂದ್ರಕ್ಕೆ ಆಗಮಿಸಿ ನೊಂದಣಿ ಮಾಡಿಸಿ ಪರೀಕ್ಷೆಯನ್ನು ಬರೆಯುವ ಅವಕಾಶ ಕಲ್ಪಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ವಿದ್ಯಾರ್ಥಿಗಳು ಅಥವಾ ಪಾಲಕರು ಈ ದೂರವಾಣಿ ಸಂಖ್ಯೆಗೆ 8722992554, 9740338346, 6360053115, ಈ ಸಂಖ್ಯೆಗಳಿಗೆ ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬೇಕೆಂದು ಅವರು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸುಧಾ ಮೂರ್ತಿ ಇನ್ಫೋ ಟ್ರಸ್ಟ್‌ನ ಗೌರವಾ ಧ್ಯಕ್ಷ ಸಂಗಪ್ಪ ಬಾವಿಮನಿ, ಕಲಾ ಮತ್ತು ವಾಣಿಜ್ಯ ವಿಭಾಗದ ಪ್ರಾಚಾರ್ಯರಾದ ಬಸಲಿಂಗಪ್ಪ ಗುಡಿಮನಿ, ಮಹಿಳಾ ಪದವಿ ಕಾಲೇಜಿನ ಪ್ರಾಚಾರ್ಯರಾದ ರಮೇಶ್ ವೆಂಕಟಾಪೂರ , ಅರ್ಥಶಾಸ್ತ್ರ ಉಪನ್ಯಾಸಕ ಮಾರುತಿ, ಸಂಯೋಜಕರಾದ ಜಮದಗ್ನಿ, ಸೇರಿದಂತೆ ಇತರರಿದ್ದರು.

# ಅದ್ದೂರಿಯಾಗಿ ಜರುಗಿದ ಮರ್ಚೆಡ್ ರಾಮಲಿಂಗೇಶ್ವರ ಜಾತ್ರೆ

ಕನ್ನಡ ಮಾತೃ ಭೂಮಿ ವಾರ್ತೆ



**ರಾಯಚೂರು,ಏ.03-** ತಾಲೂಕಿನ ಮರ್ಚೆಡ್ ಗ್ರಾಮದಲ್ಲಿ ಗುರುವಾರ ಸಂಜೆ ಶ್ರೀರಾಮ ಲಿಂಗೇಶ್ವರ ಜಾತ್ರಾ ಮಹೋತ್ಸವ ಅದ್ದೂರಿಯಾಗಿ ಜರುಗಿತು.

ಜಾತ್ರೆ ಅಂಗವಾಗಿ ರಾಮ ಲಿಂಗೇಶ್ವರ ಮೂರ್ತಿಗೆ ಬೆಳಿಗ್ಗೆ ವಿಶೇಷ ಪೂಜೆ, ಅಭಿಷೇಕ,ಪಲ್ಲಕ್ಕಿ ಸೇವೆ, ಮಹಾ ಮಂಗಳಾರತಿ ಮತ್ತು ಅನ್ನ ಸಂತರ್ಪಣೆ ಕಾರ್ಯಕ್ರಮಗಳು ಜರುಗಿದವು. ಸಂಜೆ 5-30ಕ್ಕೆ ಸಕಲ ವಾದ್ಯಗೊಂದಿಗೆ ಭಕ್ತರ ಜಯ ಘೋಷಗಳೊಂದಿಗೆ ಉಚ್ಚಾಯ ಮಹೋತ್ಸವ ಅದ್ದೂರಿಯಾಗಿ ಜರುಗಿತು.

ಗ್ರಾಮದ ಶರಣುಸ್ವಾಮಿ, ಸಿದ್ರಾಮಯ್ಯಸ್ವಾಮಿ, ಶಿವುಸ್ವಾಮಿ,ಸೇರಿದಂತೆ ಮರ್ಚೆಡ್ ಮತ್ತು ಸುತ್ತಮುತ್ತಲ ಗ್ರಾಮಗಳ ಸಹಸ್ರಾರು ಭಕ್ತರು ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡಿದ್ದರು.

ಈ ಜಾತ್ರೆ ಗ್ರಾಮ ಎಲ್ಲಾ ಧರ್ಮಗಳ ಜನರ ನಡುವೆ ಸೌಹಾರ್ದತೆ ಮತ್ತು ಐಕ್ಯತೆಯನ್ನು ಹೆಚ್ಚಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಜಾತ್ರೆಯ ಯಶಸ್ವಿ ಆಯೋಜನೆಗೆ ಸಹಕರಿಸಿದ ಎಲ್ಲಾ ಭಕ್ತರು, ಸಾರ್ವಜನಿಕರು ಹಾಗೂ ಸಂಘಟನೆಗಳ ಪದಾಧಿಕಾರಿಗಳಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ತಿಳಿಸಲಾಗುತ್ತದೆ.

ಈ ಸಂದರ್ಭದಲ್ಲಿ ಮಾತನಾಡಿದ ಗ್ರಾಮದ ಮುಖಂಡರಾದ ಮಲ್ಲನಗೌಡ ಪಾಟೀಲರು ರಾಮಲಿಂಗೇಶ್ವರ ದೇವಸ್ಥಾನವು ಐತಿಹಾಸಿಕ ಪ್ರಸ್ಥಿವಾದುದು,ಸಾಮ್ರಾಟ ಅಶೋಕನ ಕಾಲದಲ್ಲಿ ದೇವಸ್ಥಾನ ನಿರ್ಮಿಸಲಾಗಿದ್ದು,ಇಲ್ಲಿ ಅಶೋಕನ ಶಿಲಾಶಾಸನ ಇರುವುದಾಗಿ ತಿಳಿಸಿದರು. ಮತ್ತೊಬ್ಬ ಮುಖಂಡ ಮುಜಾಹಿದ್ ಅವರು ಮಾತನಾಡಿದರು.

# ರಾಯಚೂರು ನಗರದ ಹಲವೆಡೆ ಗೋಪಾಲದಾಸ ಚಿತ್ರದ ಚಿತ್ರೀಕರಣ

ಕನ್ನಡ ಮಾತೃ ಭೂಮಿ ವಾರ್ತೆ



**ರಾಯಚೂರು,ಏ.03-**ನಗರದಲ್ಲಿ ಚಲನಚಿತ್ರದ ನಿರ್ದೇಶಕರು, ನಿರ್ಮಾಪಕರಾದ ಗೋಪಿನಾಥ ಬೆಂಗಳೂರು ಇವರ ನೇತೃತ್ವದಲ್ಲಿ ಗೋಪಾಲದಾಸರು ಭಕ್ತಿ ಪ್ರಧಾನ ಕನ್ನಡ ಚಲನಚಿತ್ರದ ಚಿತ್ರೀಕರಣ ಭರದಿಂದ ಸಾಗಿದ್ದು, ನಗರದ ಕೆಲವು ಪುರಾತನ ಮನೆ ಮತ್ತು ಬಂಗಲೆಗಳನ್ನು ಚಲನಚಿತ್ರದ ದೃಶ್ಯಕ್ಕೆ ತಕ್ಕಂತೆ ಆಯ್ಕೆ ಮಾಡಲಾಗಿದ್ದು, ಬುಧವಾರ ಸಂಜೆ ಹಿರಿಯ ಸಾಹಿತಿ ವಿ. ಎಸ್. ಕಾಂತರವರ ಮನೆಯಲ್ಲಿ ಎರಡು ದೃಶ್ಯಗಳು ಚಿತ್ರೀಕರಣಗೊಂಡವು. ಇನ್ನೂ ಐದಾರು ಸನ್ನಿವೇಶಗಳ ಚಿತ್ರೀಕರಣ ಬಾಕಿ ಉಳಿದಿದ್ದು ಚಿತ್ರೀಕರಣದ ಸ್ಥಳಗಳ ಆಯ್ಕೆಯೊಂದೇ ಬಾಕಿ ಇದೆ.ಗೋಪಾಲದಾಸರ ಪಾತ್ರದಲ್ಲಿ ರಾಜೇಶ ಬೆಂಗಳೂರು, ಜಗನ್ನಾಥದಾಸರ ಪಾತ್ರದಲ್ಲಿ ಹರ್ಷವರ್ಧನ, ವಿಜಯದಾಸರ ಪಾತ್ರದಲ್ಲಿ ಅರುಣ ಕಾಂತನವರವರು ಅಭಿನಯಿಸಿದ್ದಾರೆ. ವಿಶೇಷವಾಗಿ ಕವಿ ಪಾತ್ರದಲ್ಲಿ ಜಿಲ್ಲೆಯ ಮತ್ತು ರಾಷ್ಟ್ರ ಮಟ್ಟದ ಖ್ಯಾತ ಹಿಂದುಸ್ಥಾನಿ ಕ್ಲಾರಿಯೋನೆಟ್ ವಾದಕರಾದ ರಘುಪತಿ ಪೂಜಾರ ದಿನ್ನಿ, ರಾಯಚೂರರವರು ಅಭಿನಯಿಸಿದ್ದಾರೆ. ಮಹಾರಾಜನ ಪಾತ್ರದಲ್ಲಿ ನಾರಾಯಣ ದೇಸಾಯಿ, ತಿರುಪತಿ ಜ್ಯೋತಿ, ರಾಜಭಟರ ಪಾತ್ರದಲ್ಲಿ ಪ್ರಸನ್ನ ಹುಣಸಗಿ ಅಭಿನಯಿಸಿದ್ದಾರೆ.

ಒಟ್ಟಾರೆ ಇತ್ತೀಚೆಗೆ ಚಲನಚಿತ್ರದ ಚಿತ್ರೀಕರಣಕ್ಕೂ ನಮ್ಮ ನಗರ ಪ್ರಸಿದ್ಧವಾಗುತ್ತಿದ್ದು ಸಿನಿಮಾ ರಂಗದ ಕಲಾವಿದರೂ ಸಹಿತ ರಾಯಚೂರಿನ ಕೆಲವು ಸ್ಥಳಗಳಾದ ಖಾಜಿನಗೌಡರ ಬಂಗಲೆ, ಕಾಂತನವರ ಮನೆ, ನವರಂಗ ದರ್ವಾಜ, ಕೋಟೆ ಕಟ್ಟಡ, ಕೃಷ್ಣ ಮತ್ತು ತುಂಗಭದ್ರ ನದಿ ತೀರಗಳು, ಬೋಳ ಮಾನದೊಡ್ಡಿ ಹಸಿರ ತಾಣದ ರಸ್ತೆ, ಕೆ.ಪಿ.ಸಿ. ಶಕ್ತಿನಗರ, ಮಾವಿನ ಕೆರೆ, ನೂರಾರು ವರ್ಷಗಳ ಇತಿಹಾಸ ಹೊಂದಿದ ತೀನ್ ಕಂದೀಲ ಕಲ್ಲಾನೆ, ಮಲಿಯಾಬಾದ ಕಲ್ಲಾನೆ ಹಾಗೂ ಇನ್ನಿತರ ಪ್ರಸಿದ್ಧ ತಾಣಗಳನ್ನು ತುಂಬಾ ಇಷ್ಟ ಪಟ್ಟು ಚಿತ್ರೀಕರಣ ಮಾಡಲಾಗುತ್ತಿದೆ.

# ವಿವಿಧೆಡೆ ಅಕ್ಕಮಹಾದೇವಿ ಜಯಂತಿ ಆಚರಣೆ



ಕನ್ನಡ ಮಾತೃ ಭೂಮಿ ವಾರ್ತೆ

**ಮುದಗಲ್,ಏ.03-** ಪಟ್ಟಣದ ಪುರಸಭೆ ಕಾರ್ಯಾಲಯ, ನಾಡ ಕಾರ್ಯಾಲಯ, ರೈತ ಸಂಪರ್ಕ ಕೇಂದ್ರ,ಸಮುದಾಯ ಆರೋಗ್ಯ ಕೇಂದ್ರ ಅಕ್ಕ ಮಹಾದೇವಿ ಜಯಂತಿ ಆಚರಣೆ ಮಾಡಿದರು.ಪುರಸಭೆ ಕಾರ್ಯಾಲಯ ಸಿಬ್ಬಂದಿ ರೇಣುಕಾ ಅಕ್ಕ ಮಹಾದೇವಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಿದರು.

ಈ ಸಂದರ್ಭದಲ್ಲಿ ಪುರಸಭೆ ಮುಖ್ಯಾಧಿಕಾರಿ ಪ್ರವೀಣ್ ಕುಮಾರ್ ಬೋಗಾರ್, ವ್ಯವಸ್ಥಾಪಕರು ಸುರೇಶ್ ಹೊನ್ನಳ್ಳಿ, ಕಂದಾಯ ನಿರೀಕ್ಷಕರು ಅಂತೋನಿ ರಾಜ್, ಸಿಬ್ಬಂದಿ ರಂಗನಾಥ್ ತಳವಾರ, ಝುಕಿಯಾ,ಬಸವರಾಜ , ದೀಪಾ, ಅಪ್ಸರ ಸೇರಿದಂತೆ ಮುಂತಾದವರು ಇದ್ದರು.

# ಡಿಜಿಟಲ್ ಜನಗಣತಿಗೆ ಚಾಲನೆ: ಸ್ವಯಂ ವಿವರ ದಾಖಲಿಸಲು ಡಿಸಿ ಸಲಹೆ

ಕನ್ನಡ ಮಾತೃ ಭೂಮಿ ವಾರ್ತೆ



**ವಿಜಯಪುರ,ಏ.03-** ಜಿಲ್ಲೆಯಾದ್ಯಂತ ಏ. 1ರಿಂದ ರಾಷ್ಟ್ರೀಯ ಜನಗಣತಿಯ ಮೊದಲ ಹಂತದ ಸ್ವಯಂ ಜನಗಣತಿ ಕಾರ್ಯಾ ರಂಭವಾಗಿದ್ದು, ಏ. 15 ರೊಳಗಾಗಿ ಪ್ರತಿಯೊಬ್ಬರೂ ತಮ್ಮ ಕುಟುಂಬದವರ ಸ್ವಯಂ ಗಣತಿಗೊಳಪಡಿಸುವ ಮೂಲಕ ಜನಗಣತಿ ಕಾರ್ಯ ಯಶಸ್ವಿಗೆ ಕೈ ಜೋಡಿಸುವಂತೆ ಜಿಲ್ಲಾಧಿಕಾರಿಗಳಾದ ಡಾ. ಆನಂದ ಕೆ. ಅವರು ಸಾರ್ವಜನಿಕರಿಗೆ ಮನವಿ ಮಾಡಿದರು.

ರಾಷ್ಟ್ರೀಯ ಜನಗಣತಿ 2027 ರ ಮೊದಲ ಹಂತದ ಸ್ವಯಂ ಗಣತಿ ಕುರಿತು ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ವಿಡಿಯೋ ಕಾನ್ಫರೆನ್ಸ್ ಸಭೆಯಲ್ಲಿ ಅವರು ಮಾತನಾಡಿದರು. ಸ್ವಯಂ ಗಣತಿ ಅತ್ಯಂತ ಸರಳವಾಗಿದ್ದು, ಕೇವಲ ಐದು ನಿಮಿಷದಲ್ಲಿ ಈ ಪ್ರಕ್ರಿಯೆ ಪೂರ್ಣಗೊಳಿಸಬಹುದಾಗಿದೆ. ಈಗಾಗಲೇ ನಾನು ಆ ಕಾರ್ಯ ಪೂರ್ಣಗೊಳಿಸಿದ್ದಾಗಿ ಜಿಲ್ಲಾಧಿಕಾರಿಗಳು ತಿಳಿಸಿದರು.

ದೇಶದ ಮಹತ್ವಾಕಾಂಕ್ಷಿಯ ಜನಗಣತಿ ಪ್ರಕ್ರಿಯೆ ಏ.1ರಿಂದ ಆರಂಭಗೊಂಡಿದ್ದು, ಜನಗಣತಿ ದೇಶದ ಅಭಿವೃದ್ಧಿಗೆ ಪೂರಕವಾದ ಪ್ರಮುಖ ಕಾರ್ಯವಾಗಿದೆ.ಈ ಪ್ರಕ್ರಿಯೆಯಲ್ಲಿ ಸಾರ್ವಜನಿಕರು ನಿಖರ ಮಾಹಿತಿ ನೀಡುವ ಮೂಲಕ ಸಹಕರಿಸಿಬೇಕು.ಏ.15ರವರೆಗೆ ಸ್ವಯಂ ವಿವರ ದಾಖಲಿಸಲು ಅವಕಾಶವಿದೆ ಎಂದು ತಿಳಿಸಿದರು.

ಸಾರ್ವಜನಿಕರು ಮಾಡಬೇಕಾದುದು ಇಷ್ಟೇ:ಜನಗಣತಿಯ ವೆಬ್ ಪೋರ್ಟಲ್: k||t://h.ehqO. Ãsñ.q ಗೆ ಮೊಬೈಲ್ ಸಂಖ್ಯೆ ಮತ್ತು ಒಟಿಪಿ ಬಳಸಿ ಲಾಗಿನ್ ಆಗಿ, ಬಳಿಕ ನಿಮ್ಮ ಸ್ಥಳ ಆಯ್ಕೆ ಮಾಡಿ,ನಕ್ಷೆಯಲ್ಲಿ ನಿಮ್ಮ ಮನೆ ಗುರುತಿಸಿ, ಬಳಿಕ ಮನೆಯ ಇಲ್ಲವೇ ಕುಟುಂಬದ ವಿವರ ಭರ್ತಿ ಮಾಡಿ, ನಿಮ್ಮ TC Shihwhqeh MB ಪಡೆಯಿರಿ. ಈಗ ಬಂದಿರುವ ನಿಮ್ಮ ಎಸ್ ಇ ಐಡಿ ಅನ್ನು ಸುರಕ್ಷಿತವಾಗಿ ಇಟ್ಟು, ಗಣತಿದಾರರು ಮನೆಗೆ ಬಂದಾಗ ಅದನ್ನು ಅವರೊಂದಿಗೆ ಹಂಚಿಕೊಂಡರೆ ನೀವು ಜನಗಣತಿ ಕಾರ್ಯಕ್ಕೆ ಕೈಜೋಡಿಸಿದಂತಾಗುವುದು ಎಂದರು.

ಕ್ಷೇತ್ರ ಪರಿಶೀಲನೆ: ಏ. 16 ರಿಂದ ಮೇ 15 ರವರೆಗಿನ ಅವಧಿಯಲ್ಲಿ ಗಣತಿದಾರರು ಮನೆಗೆ ಭೇಟಿ ನೀಡಿ ವಿವರಗಳನ್ನು ಪರಿಶೀಲಿಸುತ್ತಾರೆ.

ಒಂದು ವೇಳೆ ಸ್ವಯಂ ಗಣತಿ ಪೂರ್ಣಗೊಳಿಸದಿದ್ದರೆ, ಅವರು ನಿಮ್ಮಿಂದಲೇ ಮಾಹಿತಿಯನ್ನು ಸಂಗ್ರಹಿಸುತ್ತಾರೆ. ಈ ಅವಧಿಯಲ್ಲಿ ಶೇ.100ರಷ್ಟು ಗೌಪ್ಯತೆ ಇಟ್ಟು ನಿಮ್ಮ ಸ್ವಯಂ ಗಣತಿಯನ್ನು ಪೂರ್ಣಗೊಳಿಸಲು ಅವಕಾಶ ಕಲ್ಪಿಸಲಾಗಿದೆ. ಜಿಲ್ಲೆಯ ಜನತೆ ಇದರ ಸದುಪಯೋಗ ಪಡೆದುಕೊಂಡು ಜನಗಣತಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬಹುದಾಗಿದೆ ಎಂದು ಜಿಲ್ಲಾಧಿಕಾರಿಗಳಾದ ಡಾ. ಆನಂದ ಕೆ. ಅವರು ಹೇಳಿದರು.

ಅಧಿಕಾರಿಗಳಿಗೆ ಸೂಚನೆ: ಪ್ರತಿ ಇಲಾಖೆಗಳ ಮುಖ್ಯಸ್ಥರು ತಮ್ಮ ಸಿಬ್ಬಂದಿಯ ಸ್ವಯಂ ಗಣತಿ ಪೂರ್ಣಗೊಳಿಸಿ ಎನ್ಯೂಮರೇಶನ್ ಮಾಡಿಬೇಕು. ತಮ್ಮ ತಮ್ಮ ಕಚೇರಿಗಳಲ್ಲಿ ಎಷ್ಟು ಸಿಬ್ಬಂದಿ ಸ್ವಯಂ ಗಣತಿ ಮಾಡಿಸಿದ್ದೀರಿ ಎಂಬ ವರದಿಯನ್ನು ಜಿಲ್ಲಾಡಾಳಿತಕ್ಕೆ ತಕ್ಷಣ ಸಲ್ಲಿಸುವ ಮೂಲಕ ಜನಗಣತಿ ಯಶಸ್ವಿಗೊಳಿಸಲು ಜಿಲ್ಲಾಧಿಕಾರಿಗಳು ಜಿಲ್ಲಾ ಮಟ್ಟದ ಅಧಿಕಾರಿಗಳಿಗೂ ಮನವಿ ಮಾಡಿದರು.

ಜನಗಣತಿಯಲ್ಲಿ ಜಿಲ್ಲೆಯ ಪ್ರತಿಯೊಬ್ಬರೂ ಭಾಗವಹಿಸುವುದು ಕಡ್ಡಾಯವಾಗಿದೆ. ಹಾಗಾಗಿ ಪ್ರತಿ ತಾಲೂಕಿನಿಂದ ಯಾರೂ ಜನಗಣತಿಯಿಂದ ಹೊರಗುಳಿಯದಂತೆ ತಾಲೂಕು ಮಟ್ಟದ ಅಧಿಕಾರಿಗಳು ನೋಡಿಕೊಳ್ಳಬೇಕು ಎಂದರು.

ಇನ್ನೊಂದೆಡೆ ಅತೀ ದೊಡ್ಡ ಇಲಾಖೆಯ ಖ್ಯಾತಿಯ ಶಿಕ್ಷಣ ಹಾಗೂ ಪೊಲೀಸ್ ಇಲಾಖೆಯವರು ಜನಗಣತಿಯನ್ನು ಗಂಭೀರವಾಗಿ ಪರಿಗಣಿಸಬೇಕು ಎಂದ ಅವರು, ಶಿಕ್ಷಣ ಇಲಾಖೆಯಲ್ಲಿ ಬಿಸಿಯೂಟ ಕಾರ್ಯಕರ್ತೆಯರು ಬಿಟ್ಟು ಹೋಗದಂತೆ ಶಿಕ್ಷಣ ಇಲಾಖೆ ಅಧಿಕಾರಿಗಳು ನೋಡಿಕೊಳ್ಳಬೇಕು ಎಂದು ಸಭೆಯಲ್ಲಿ ಪಾಲ್ಗೊಂಡಿದ್ದ ಡಿಡಿಪಿಐ ಹಾಗೂ ಬಿಇಒಗಳಿಗೆ ಸೂಚಿಸಿದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುವ ಸ್ವಸಹಾಯ ಗುಂಪಿನವರು, ಆರೋಗ್ಯ ಇಲಾಖೆಯಡಿ ಕಾರ್ಯನಿರ್ವಹಿಸುವ ಆಶಾ ಕಾರ್ಯಕರ್ತೆಯರು, ಸ್ಥಳೀಯ ಸಂಸ್ಥೆಯಡಿ ಕೆಲಸಮಾಡುವ ಪೌರಕಾರ್ಮಿಕರು ಜನಗಣತಿಯಿಂದ ಹೊರಗುಳಿಯದಂತೆ ನೋಡಿಕೊಳ್ಳುವ ಮೂಲಕ ಅವರನ್ನೆಲ್ಲ ಸ್ವಯಂ ಗಣತಿಗೆ ಒಳಪಡಿಸಬೇಕು ಎಂದು ಆಯಾ ಇಲಾಖೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.

**ಪ್ರತ್ಯೇಕ ಸಭೆಗೆ ಸೂಚನೆ:** ಈ ವಿಷಯಕ್ಕೆ ಸಂಬಂಧಿಸಿದಂತೆ ಆಯಾ ಇಲಾಖೆಯ ಅಧಿಕಾರಿಗಳು ಪ್ರತ್ಯೇಕ ಸಭೆ ನಡೆಸಿ, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಕಡ್ಡಾಯವಾಗಿ ಸ್ವಯಂ ಗಣತಿಗೆ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳು ಸೂಚಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಮಾತನಾಡಿ, ಜಿಲ್ಲೆಯ ಪ್ರತಿ ಪೊಲೀಸ್ ಠಾಣೆ ಸಿಬ್ಬಂದಿಯನ್ನು ಸ್ವಯಂ ಗಣತಿ ಮಾಡಿಸಿಕೊಳ್ಳಲು ಸೂಚಿಸುವುದಾಗಿ ಜಿಲ್ಲಾಧಿಕಾರಿಗಳಿಗೆ ವಿವರಿಸಿದರು.

ಇದಕ್ಕೆ ಸಮಯ ಬಹಳೇನಿಲ್ಲ. ಕೇವಲ 15 ದಿನಗಳಲ್ಲಿ ಈ ಪ್ರಕ್ರಿಯೆ ಪೂರ್ಣಗೊಳಿಸಬೇಕಿದೆ. ಇದಕ್ಕೆ ಸಂಬಂಧಿಸಿದಂತೆ ಕೆಲ ಸಿಬ್ಬಂದಿಗೆ ತರಬೇತುಗೊಳಿಸಲಾಗಿದೆ.

ಆ ತರಬೇತಿದಾರರಿಗೆ ಶೀಘ್ರದಲ್ಲಿ ಗುರುತಿನ ಚೀಟಿ ನೀಡಲಾ ಗುವುದು ಎಂದ ಅವರು, 600 ರಿಂದ 800 ಜನರಿಗೆ ಸಾಕಾಗುವಷ್ಟು ಸಿಬ್ಬಂದಿ ನಿಯೋಜಿಸಬೇಕು ಎಂದರು.

ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಿಷಿ ಆನಂದ, ಅಪರ ಜಿಲ್ಲಾಧಿಕಾರಿಗಳಾದ ಡಾ.ಔದ್ರಾಮ, ಇಂಡಿ, ವಿಜಯಪುರ ಉಪವಿಭಾಗಾಧಿಕಾರಿಗಳು, ಎಲ್ಲ ತಾಲೂಕಿನ ತಹಸೀಲ್ದಾರ್ ರು, ಬಿಇಒ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಪಾಲ್ಗೊಂಡಿದ್ದರು.

# ಜೋಳದ ಬಣವೆ ಬೆಂಕಿಗೆ ಆಹುತಿ ದುಷ್ಕರ್ಮಿಗಳ ವಿರುದ್ಧ ಕ್ರಮಕ್ಕೆ ಆಗ್ರಹ



ಕನ್ನಡ ಮಾತೃ ಭೂಮಿ ವಾರ್ತೆ

**ಕೊಪ್ಪಳ,ಏ.03-**ಕುಷ್ಟಗಿ ತಾಲೂಕಿನ ಹನುಮಸಾಗರ ದಲ್ಲಿ ಬೆಂಕಿ ಅವಘಡ ಸಂಭವಿಸಿ ಜೋಳದ ಬಣವೆ ಸಂಪೂರ್ಣ ಸುಟ್ಟು ಭಸ್ಮವಾಗಿದೆ.

ಹನುಮಸಾಗರದ ನಜೀರ್ ಸಾಬ್ ಮೂಲಿಮನಿ ಅವರ ಪಪ್ಪಾಯಿ ತೋಟದ ಬದುವಿನಲ್ಲಿದ್ದ ಸಣ್ಣ ಮಾಬುಸಾಬ್ ಮೂಲಿಮನಿ ಅವರಿಗೆ ಸೇರಿದ ಬಿಳಿ ಜೋಳದ ಬಣವಿಗೆ ಏಕಾಏಕಿ ಬೆಂಕಿ ತಗುಲಿ, ಸುಮಾರು ಆರು ಟ್ರಿಪ್‌ಗಳಷ್ಟು ಬಣವೆ ಸಂಪೂರ್ಣ ಸುಟ್ಟು ಹೋಗಿದೆ.

ಘಟನೆಯ ಮಾಹಿತಿ ತಿಳಿದು ಮಾಲಕರು ಹಾಗೂ ಸಂಬಂಧಿಕರು ಬೆಂಕಿ ಆರಿಸಲು ಹರಸಾಹಸ ಪಟ್ಟರು. ಬೆಂಕಿಯ ತೀವ್ರತೆ ಹೆಚ್ಚಿದ್ದರಿಂದ ನಿಯಂತ್ರಿಸಲು ಸಾಧ್ಯವಾಗಲಿಲ್ಲ. ಬಳಿಕ ಅಗ್ನಿಶಾಮಕ ದಳ ಸ್ಥಳಕ್ಕೆ ಆಗಮಿಸಿ ಬೆಂಕಿಯನ್ನು ನಂದಿಸಿತು.

ಈ ಅವಘಡವು ದುಷ್ಕರ್ಮಿಗಳ ಕೃತ್ಯವಾಗಿರಬಹುದೆಂಬ ಅನುಮಾನ ವ್ಯಕ್ತವಾಗಿದ್ದು, ತಪ್ಪಿತಸ್ಥರನ್ನು ಶೀಘ್ರ ಪತ್ತೆಹಚ್ಚಿ ಕಾನೂನು ಕ್ರಮ ಕೈಗೊಳ್ಳ ಬೇಕು ಎಂದು ರೈತ ಮುಖಂಡರು ಒತ್ತಾಯಿಸಿದ್ದಾರೆ. ಜೊತೆಗೆ ನಷ್ಟ ಅನುಭವಿಸಿದ ರೈತನಿಗೆ ತಕ್ಷಣ ಪರಿಹಾರ ನೀಡುವಂತೆ ಆಗ್ರಹಿಸಲಾಗಿದೆ.

# ...ಮೊದಲನೇ ಪುಟದಿಂದ

## ಎಸ್‌ಎಸ್‌ಎಲ್‌ಸಿಯಲ್ಲಿ ಹಿಂದಿ ಭಾಷೆ ಅಂಕ ಕೈಬಿಟ್ಟ ತೀರ್ಮಾನ ಮರುಪರಿಶೀಲಿಸಲು ಕೋರಿ ರಾಜ್ಯಪಾಲರ ಪತ್ರ

ಬೀರಬಹುದು ಎಂದು ಉಲ್ಲೇಖಿಸ ಲಾಗಿದೆ. ಇಂತಹ ನೀತಿ ನಿರ್ಧಾರವು ರಾಜ್ಯದ ಶಾಲಾ ಶಿಕ್ಷಣದ ಒಟ್ಟಾರೆ ಗುಣಮಟ್ಟ ಮತ್ತು ಒಳಗೊಳ್ಳುವಿಕೆಯ ಮೇಲೆ ಬೀರಬಹುದಾದ ದೀರ್ಘಕಾಲಿನ ಪರಿಣಾಮಗಳ ಬಗ್ಗೆ ಶಿಕ್ಷಕರು, ಪೋಷಕರು ಮತ್ತು ಶಿಕ್ಷಣ ತಜ್ಞರಲ್ಲಿ ಇರುವ ಆತಂಕಗಳನ್ನು ಈ ಮನವಿ ಪ್ರತಿಬಿಂಬಿಸುತ್ತಿದೆ ಎಂದು ಪತ್ರದಲ್ಲಿ ತಿಳಿಸಲಾಗಿದೆ.

ಸಂಘ ಸಲ್ಲಿಸಿದ ಮನವಿಯಲ್ಲಿ ಪ್ರಸ್ತಾಪಿ ಸಿದ ವಿಷಯಗಳನ್ನು ರಾಜ್ಯಪಾಲರು ಗಮನಿಸಿದ್ದು, ಶಿಕ್ಷಣ ಕ್ಷೇತ್ರದ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಅಂಶಗಳನ್ನು ಗಮನದ ಲ್ಲಿಟ್ಟುಕೊಂಡು ಈ ವಿಷಯವನ್ನು ಸಮಗ್ರವಾಗಿ ಪರಿಶೀಲಿಸಬೇಕು ಎಂದು ಆಶಿಸಿದ್ದಾರೆ. ಆದ್ದರಿಂದ, ಶಾಲಾ ಶಿಕ್ಷಣ ಇಲಾಖೆ ಮತ್ತು ಇತರ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಈ ವಿಷಯವನ್ನು ಪರಿಶೀಲಿಸಬೇಕೆಂದು ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮತ್ತು ರಾಜ್ಯದ ಶೈಕ್ಷಣಿಕ ಉದ್ದೇಶಗಳ ಹಿತದೃಷ್ಟಿಯಿಂದ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಕೋರಿದ್ದಾರೆ.

ತೃತೀಯ ಭಾಷೆಗೆ ಅಂಕಗಲ ಬದಲು ಗ್ರೇಡಿಂಗ್ ವ್ಯವಸ್ಥೆ: SSLCಯಲ್ಲಿ ತೃತೀಯ ಭಾಷೆ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಅಂಕ ನೀಡುವ ಬದಲು ಗ್ರೇಡಿಂಗ್ ವ್ಯವಸ್ಥೆ ಜಾರಿ ತರಲು ರಾಜ್ಯ ಸರ್ಕಾರ ಮುಂದಾಗಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಒತ್ತಡ ಕಡಿಮೆ ಮಾಡಲು ರಾಜ್ಯ ಸರ್ಕಾರ ಈ ತೀರ್ಮಾನ ಕೈಗೊಂಡಿದೆ.

2026ರಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆ ತೆಗೆದುಕೊಂಡು ಪರೀಕ್ಷೆ ಬರೆಯುತ್ತಿರುವ ವಿದ್ಯಾರ್ಥಿಗಳಿಗೆ ಈ ವರ್ಷದಿಂದಲೇ ಜಾರಿ ತರಲು ಸರ್ಕಾರ ಮುಂದಾಗಿದೆ. ಈ ಮೂಲಕ ಇನ್ಮುಂದೆ ಪಾಸ್ ಅಥವಾ ಫೇಲ್ ಬದಲು ಗ್ರೇಡ್ ನೀಡಲಾ ಗುತ್ತದೆ. ಇದರಿಂದಾಗಿ ಇನ್ಮುಂದೆ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಒಟ್ಟು 625ರ ಬದಲು 525 ಅಂಕಗಳು ಇರಲಿವೆ. ಸರ್ಕಾರದ ಈ ಕ್ರಮವನ್ನು ಬಿಜೆಪಿ ನಾಯಕರು ಖಂಡಿಸಿದ್ದಾರೆ.

## 30ಲಕ್ಷ ಬೆಲೆಬಾಳುವ ಶೆಡ್‌ಗೆ ಬೆಂಕಿ

ಸದರಿ ತಕರಾರು ಅರ್ಜಿ ವಿಚಾರಣೆ ಮಾಡಿದ ಅಧಿಕಾರಿಗಳು ಭ್ರಷ್ಟಾಚಾರದಲ್ಲಿ ಭಾಗವಹಿಸಿ ವಿನಾಕಾರಣ ಸಮಯ ತಳ್ಳಿ ವಿಚಾರಣೆ ಮುಗಿಸದೇ ಹೈಕೋರ್ಟ ಅಂಗಳಕ್ಕೆ ತಳ್ಳಿರುತ್ತಾರೆ. ಇಂದಿಗೂ ಹೈಕೋರ್ಟನಲ್ಲಿ ಪ್ರಕರಣ ನಡೆದಿರುತ್ತದೆ. ಇದೆ ಸಮಯದಲ್ಲಿ ಖರಿಧಿದಾರ ಶೆಡ್ ನಲ್ಲಿ ಇಲ್ಲದನ್ನು ನೋಡಿ ನಕಲಿ ಶಂಶುದ್ದಿನ ಎನ್ನುವ ವ್ಯಕ್ತಿ ಅಕ್ರಮ ಕೂಟ ಕಟ್ಟಿಕೊಂಡು ದಿನಾಂಕ 31-03-2026 ರಂದು ರಾತ್ರಿ ವೇಳೆ ಸದರಿ ಶೆಡ್‌ಗೆ ಬೆಂಕಿ ಹಚ್ಚಿ ಸುಟ್ಟಿರುತ್ತಾರೆ. 30ಲಕ್ಷಕ್ಕೂ ಅಧಿಕ ಬೆಲೆಬಾಳುವ ಎಲ್ಲಾ ಹೈಟೆಕ್ ಸಾಮಾಗ್ರಿಗಳು ಸುಟ್ಟು ಕರಕಲಾಗಿರುತ್ತದೆ. ಇದನ್ನು ಅರಿತ ಗ್ರಾಮೀಣ ಪೊಲೀಸ್ ಠಾಣೆಯ ಪಿಎಸ್ಐ ಹಣಮಂತ ಭಂಕಲಗಿ ರವರು ಇಂದು ಸ್ಥಳ ಪರಿಶೀಲನೆ ಮಹಜರು ಮಾಡಿರುತ್ತಾರೆ.

## ಕೊನೆಗೂ ರಾಜ್ಯದಲ್ಲಿ ಬಹುನಿರೀಕ್ಷಿತ ಇ-ವಿಧಾನ ಯೋಜನೆ ಜಾರಿಗೆ ಕೂಡಿ ಬಂದ ಮುಹೂರ್ತ-ಯು.ಟಿ. ಖಾದರ್ ಘೋಷಣೆ

ಯೋಜನೆಯನ್ನು ಅನುಷ್ಠಾನ ಗೊಳಿಸಲು ಯೋಜಿಸಲಾಗಿತ್ತು. ಇದಕ್ಕಾಗಿ ಕೇಂದ್ರ ಸರ್ಕಾ ರ ರಾಷ್ಟ್ರೀಯ ಇ-ವಿಧಾನ ಅಪ್ಲಿಕೇಶನ್ ಗೆ ಚಾಲನೆ ನೀಡಿತ್ತು. ಒಂದು ರಾಷ್ಟ್ರ, ಒಂದು ಅಪ್ಲಿಕೇಶನ್ ಎಂಬ ಪರಿಕಲ್ಪನೆಯೊಂದಿಗೆ ಈ ಯೋಜನೆ ರೂಪಿಸಲಾಗಿದೆ. ಆದರೆ, ಕರ್ನಾಟಕ ಕೇಂದ್ರದ ಫೆಬ್ಬಿ ಅಪ್ಲಿಕೇಷನ್ ಅಳವಡಿಕೆ ಮಾಡುವುದೋ ಅಥವಾ ರಾಜ್ಯವೇ ಪ್ರತ್ಯೇಕವಾಗಿ ಅಪ್ಲಿಕೇಷನ್ ಅಭಿವೃದ್ಧಿಪಡಿಸಿ ಅಳವಡಿಸುವುದೋ ಎಂಬ ಗೊಂದಲದಲ್ಲೇ ವರ್ಷಗಳ ಕಾಲಹರಣ ಮಾಡಿದೆ. ಆರಂಭದಲ್ಲಿ 2015ರಲ್ಲಿ ಯೋಜನೆಯ ನೋಡಲ್ ಏಜೆನ್ಸಿಯಾಗಿರುವ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವಾಲಯ ಇ-ವಿಧಾನ ಅನುಷ್ಠಾನ ಸಂಬಂಧ ಕರಡು ಡಿಪಿಆರ್ ನ್ನು ಎಲ್ಲಾ ರಾಜ್ಯಗಳಿಗೆ ಅಗತ್ಯಕ್ಕನುಸಾರ ಸಿದ್ಧಪಡಿಸಿತ್ತು. ಇತ್ತ ಕರ್ನಾಟಕ ರಾಜ್ಯ ಮಟ್ಟದ ಫೆಬ್ಬಿಅ ಅನುಷ್ಠಾನ ಸಮಿತಿ ರಚನೆ ಮಾಡಿತ್ತು. ಈ ವೇಳೆ ರಾಜ್ಯ ಸರ್ಕಾರ ತಮ್ಮದೇ ಪ್ರತ್ಯೇಕ ಅಪ್ಲಿಕೇಶನನ್ನು ರಾಜ್ಯದಲ್ಲಿನ ವಿಧಾನಸಭೆ ಹಾಗೂ ವಿಧಾನಪರಿಷತ್ ವ್ಯವಸ್ಥೆಗೆ ಅನುಗುಣವಾಗಿ ಅಭಿವೃದ್ಧಿ ಪಡಿಸುವುದಾಗಿ ಕೇಂದ್ರ ಸರ್ಕಾರಕ್ಕೆ ಮಾಹಿತಿ ನೀಡಿತು.್ ಫೆಐಇ ಜೊತೆಗೂಡಿ ಕರ್ನಾಟಕ ವಿಧಾನಸಭೆ ಕಂಪ್ಯೂಟರ್ ಕೇಂದ್ರದ ಅಧಿಕಾರಿಗಳು ಕಾಗದ ರಹಿತ ಕಲಾಪದ ವ್ಯವಸ್ಥೆ ಜಾರಿಗೆ 60.84 ಕೋಟಿ ರೂ. ವೆಚ್ಚದ ಡಿಪಿಆರ್ ಸಿದ್ಧಪಡಿಸಿತು.್ 2018ರಲ್ಲಿ ಆ ಡಿಪಿಆರ್ ಕೇಂದ್ರಕ್ಕೆ ಕಳುಹಿಸಿಕೊಟ್ಟಿತ್ತು.್ ಇದಾದ ಬಳಿಕ ಯೋಜನೆ ನನೆಗುದಿಗೆ ಬಿದ್ದಿತು.

2019ರಲ್ಲಿ ಮತ್ತೆ ಯೋಜನೆ ಅನುಷ್ಠಾನದ ಪ್ರಸ್ತಾವನೆಯನ್ನು ಕರ್ನಾಟಕ ವಿಧಾನಸಭೆ ಸಚಿವಾಲಯ ಕೈಗೆತ್ತಿಕೊಂಡಿತು.್ ಆಗ ಯೋಜನಾ ವೆಚ್ಚ 80.64 ಕೋಟಿ ರೂ.ಗೆ ಏರಿಕೆಯಾಗಿತ್ತು.್ 2020ರಲ್ಲಿ ರಾಜ್ಯ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವಾಲಯಕ್ಕೆ ಪತ್ರ ಬರೆದು ಫೆಬ್ಬಿಅ ಬದಲು ಕರ್ನಾಟಕ ವಿಧಾನಮಂಡಲ ತನ್ನದೇ ಸಾಫ್ಟ್‌ವೇರ್ ಬಳಸಿ ಕಾಗದ ರಹಿತ ವ್ಯವಸ್ಥೆಯನ್ನು ಜಾರಿಗೊಳಿಸುವುದಾಗಿ ಮಾಹಿತಿ ನೀಡಿತು. ಅದರಂತೆ ಕಿಯೋನಿಕ್ಸ್ ಡಿಪಿಆರ್ ಸಿದ್ಧಪಡಿಸಿದ್ದು, ಅದರ ಯೋಜನಾ ವೆಚ್ಚ 254 ಕೋಟಿ ರೂ.್ ತಲುಪಿತ್ತು. ಇದು ಸಾಕಷ್ಟು ಟೀಕೆಗೆ ಗುರಿಯಾಯಿತು. ಮತ್ತೆ ಯೋಜನೆ ಹಳ್ಳಹಿಡಿಯಿತು. ದುಬಾರಿ ಯೋಜನಾ ವೆಚ್ಚ, ಹಣಕಾಸು ಕೊರತೆ, ಗೊಂದಲ, ಇಚ್ಛಾಶಕ್ತಿ ಕೊರತೆಯಿಂದಾಗಿ ಮಹತ್ವದ ಕಲಾಪ ಸಂಪೂರ್ಣ ಡಿಜಿಟಲೀಕರಣದ ಯೋಜನೆ ಅನುಷ್ಠಾನ ವಿಳಂಬಗೊಂಡಿತು.

ಇದೀಗ ಕೇಂದ್ರದ ಫೆಬ್ಬಿಅಗೆ ರಾಜ್ಯ ಸರ್ಕಾರ ಒಪ್ಪಿಗೆ: ಇದೀಗ ರಾಜ್ಯ ಸರ್ಕಾರ ಕೇಂದ್ರದ ಫೆಬ್ಬಿಅ ಇ-ವಿಧಾನಕ್ಕೇ ಮಣೆ ಹಾಕಿದೆ. ವಿಧಾನಸಭೆ ಸಚಿವಾಲಯ ಯೋಜನೆಗೆ ಸುಮಾರು 60-70 ಕೋಟಿ ರೂ. ವೆಚ್ಚವಾಗುವ ಅಂದಾಜು ಮಾಡಿದೆ. ಬೆಂಗಳೂರು ವಿಧಾನಸೌಧ ಹಾಗೂ ಬೆಳಗಾವಿ ಸುವರ್ಣಸೌಧದಲ್ಲಿ ಇ-ವಿಧಾನ ವ್ಯವಸ್ಥೆ ಅಳವಡಿಕೆಗೆ ತಲಾ 30 ಕೋಟಿ ರೂ.ನಂತೆ ಸುಮಾರು 60-70 ಕೋಟಿ ರೂ. ಅಂದಾಜು ಮಾಡಿದೆ. ಈ ಸಂಬಂಧ ಸ್ಪೀಕರ್ ಯು.ಟಿ.ಖಾದರ್ ತಮ್ಮದೇ ಸಾಫ್ಟ್‌ವೇರ್ ಅಭಿವೃದ್ಧಿಪಡಿಸಿ ಅನುಷ್ಠಾನಗೊಳಿಸಲು ಬೇಕಾಗುವ 250-300 ಕೋಟಿ ರೂ. ಯೋಜನಾ ವೆಚ್ಚದ ಪ್ರಸ್ತಾಪ ಹಾಗೂ ಕೇಂದ್ರದಿಂದ 60% ಅನುದಾನಿತ ಫೆಬ್ಬಿಅ ಮೂಲಕ 60-70 ಕೋಟಿ ರೂ. ಯೋಜನಾ ವೆಚ್ಚದಲ್ಲಿ ಇ-ವಿಧಾನ ಅನುಷ್ಠಾನಗೊಳಿಸುವ ಪ್ರಸ್ತಾವನೆಯನ್ನು ಸಿಎಂ ಸಿದ್ದರಾಮಯ್ಯಗೆ ಸಲ್ಲಿಸಿದ್ದರು.್

ಎರಡೂ ಪ್ರಸ್ತಾವನೆಗಳ ಸಾಧಕ ಬಾಧಕಗಳು, ಕಾರ್ಯಸಾಧು, ಹಣಕಾಸು ಹೊರೆ, ಅನುಕೂಲತೆಗಳ ವಿವರವನ್ನು ಸಲ್ಲಿಸಲಾಯಿತು. ಕೊನೆಗೆ ಸಿಎಂ ಸಿದ್ದರಾಮಯ್ಯ ವೆಚ್ಚ, ಕೇಂದ್ರದ ಅನುದಾನ, ಇತರೆ ಅನುಕೂಲತೆಗಳನ್ನು ಮನಗಂಡು ಕೇಂದ್ರ ಅನುದಾನಿತ ಫೆಬ್ಬಿಅ ಇ-ವಿಧಾನ ಯೋಜನೆ ಪ್ರಸ್ತಾವನೆಗೆ ಅನುಮತಿ ನೀಡಿದ್ದಾರೆ. ಅದರಂತೆ ಯೋಜನಾ ವೆಚ್ಚದಲ್ಲಿ 60% ಕೇಂದ್ರ ಭರಿಸಲಿದ್ದರೆ, 40% ರಾಜ್ಯ ಸರ್ಕಾರ ಭರಿಸಲಿದೆ ಎಂದು ವಿಧಾನಸಭೆ ಸಚಿವಾಲಯದ ಹಿರಿಯ ಅಧಿಕಾರಿ ತಿಳಿಸಿದ್ದಾರೆ.

3 ತಿಂಗಳಲ್ಲಿ ಉಭಯ ಸದನ ಪೇಪರ್ ಲೆಸ್: ಮೂರು ತಿಂಗಳಲ್ಲಿ ಉಭಯ ಸದನಗಳಲ್ಲಿ ಕಾಗದ ರಹಿತ ಕಲಾಪಕ್ಕಾಗಿನ ಇ-ವಿಧಾನ ಯೋಜನೆಯನ್ನು ಅನುಷ್ಠಾನಗೊಳಿಸಲು ವಿಧಾನಸಭೆ ಸಚಿವಾಲಯದ ಅಧಿಕಾರಿಗಳು ಮುಂದಾಗಿದ್ದಾರೆ. ಕೇಂದ್ರದ ಅಧಿಕಾರಿಗಳು ಬೆಂಗಳೂರು, ಬೆಳಗಾವಿ ಉಭಯ ಸದನಗಳಿಗೆ ಭೇಟಿ ನೀಡಿ ಪರಿಶೀಲಿಸಿ ಮತ್ತೊಮ್ಮೆ ಯೋಜನಾ ವೆಚ್ಚವನ್ನು ಅಂದಾಜಿಸಲಿದ್ದಾರೆ. ಕಸ್ಟಮೈಸ್ಡ್ ಫೆಬ್ಬಿಅ ಅಪ್ಲಿಕೇಷನ್ ಸಿದ್ಧವಾಗಿದ್ದು, ರಾಜ್ಯಕ್ಕೆ ಅನುಗುಣವಾಗಿ ಕೆಲ ಬದಲಾವಣೆಯೊಂದಿಗೆ ಇ-ವಿಧಾನ ಶೀಘ್ರ ಅನುಷ್ಠಾನ ಕಾರ್ಯ ಆರಂಭವಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮುಂದಿನ ಮುಂಗಾರು ಅಧಿವೇಶನ ವೇಳೆಗೆ ಕಾಗದ ರಹಿತ ವಿಧಾನಮಂಡಲ ಕಲಾಪ ನಡೆಯಲಿದೆ ಎಂದು ಅಧಿಕಾರಿಗಳು ವಿಶ್ವಾಸದಲ್ಲಿ ಇದ್ದಾರೆ.್ ಇ-ವಿಧಾನದಡಿ ವಿಧಾನಸಭೆಯ 224 ಶಾಸಕರು ಹಾಗೂ ವಿಧಾನಪರಿಷತ್‌ನ 75 ಸದಸ್ಯರಿಗೆ ಸದನದೊಳಗೆ ಪ್ರತ್ಯೇಕವಾಗಿ ಟಚ್ ಸ್ಕ್ರೀನ್‌ಗಳನ್ನು ಅಳವಡಿಕೆ ಮಾಡಲಾಗುವುದು.್ ಸಂಸತ್ ಮಾದರಿಯಂತೆ ಪ್ರಶ್ನೆಗಳು, ಲಿಖಿತ ಉತ್ತರಗಳು, ಮಸೂದೆ ಪ್ರತಿ, ವರದಿಗಳು, ಕಾಗದ ಪತ್ರಗಳು ಎಲ್ಲವೂ ಈ ಟಚ್ ಸ್ಕ್ರೀನ್ ನಲ್ಲಿ ಲಭ್ಯವಾಗಲಿದೆ. ಆ ಮೂಲಕ ಸಂಪೂರ್ಣವಾಗಿ ಕಾರ್ಯಕಲಾಪ ಕಾಗದ ರಹಿತವಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

20 ರಾಜ್ಯಗಳಲ್ಲಿ ಇ-ವಿಧಾನ ಅನುಷ್ಠಾನ: ಈಗಾಗಲೇ 20 ರಾಜ್ಯಗಳ ವಿಧಾನಮಂಡಲದಲ್ಲಿ ಇ-ವಿಧಾನ ಯೋಜನೆ ಅನುಷ್ಠಾನವಾಗಿದೆ. ಇದರಲ್ಲಿ ಬಿಹಾರ, ಹಿಮಾಚಲ ಪ್ರದೇಶ, ಕೇರಳ, ನಾಗಾಲ್ಯಾಂಡ್, ಉತ್ತರ ಪ್ರದೇಶ, ಸಿಕ್ಕಿಂ, ತೆಲಂಗಾಣ, ಪಂಜಾಬ್, ಹರ್ಯಾಣ ಸೇರಿ 20 ರಾಜ್ಯಗಳು ಇ-ವಿಧಾನ ಅನುಷ್ಠಾನಗೊಳಿಸಿ, ಸಂಪೂರ್ಣ ಕಾಗದ ರಹಿತ ಕಲಾಪಕ್ಕೆ ಪರಿವರ್ತನೆಯಾಗಿವೆ. ಈಗಾಗಲೇ ಒಟ್ಟು 22 ರಾಜ್ಯಗಳಲ್ಲಿ ಇ-ವಿಧಾನ ಅನುಷ್ಠಾನ ಹಾಗೂ ಅನುಷ್ಠಾನದ ವಿವಿಧ ಹಂತಗಳಲ್ಲಿವೆ ಎಂದು ವಿಧಾನಸಭೆ ಸಚಿವಾಲಯ ಅಧಿಕಾರಿ ತಿಳಿಸಿದ್ದಾರೆ.

ಕಾಗದ ಪತ್ರ ಮುದ್ರಣಕ್ಕೆ ಅಂದಾಜು 30 ಕೋಟಿ ವೆಚ್ಚ: ವಿಧಾನಮಂಡಲ ಅಧಿವೇಶನದ ಕಾಗದ ಪತ್ರಗಳ ಮುದ್ರಣಕ್ಕಾಗಿ ವಾರ್ಷಿಕ ಸುಮಾರು 30 ಕೋಟಿ ರೂ. ವೆಚ್ಚವಾಗುತ್ತಿದೆ. ಇದೀಗ ಸಂಪೂರ್ಣ ಕಾಗದ ರಹಿತ ಕಲಾಪದತ್ತ ರಾಜ್ಯ ಹೋಗುತ್ತಿರುವುದರಿಂದ ಪರಿಸರ ರಕ್ಷಣೆ ಜೊತೆಗೆ ವೆಚ್ಚ ಉಳಿತಾಯವೂ ಆಗಲಿದೆ. ಅನೇಕ ವಿಳಂಬಗಳ ಬಳಿಕ ಐಟಿ ಹಬ್ ಕರ್ನಾಟಕ ಕೊನೆಗೂ ಕಾಗದ ರಹಿತ ಡಿಜಿಟಲ್ ಕಲಾಪದತ್ತ ಹೆಜ್ಜೆ ಇಟ್ಟಿರುವುದು ನಿಜಕ್ಕೂ ನಿಟ್ಟುಸಿರು ಬಿಡುವ ವಿಚಾರವಾಗಿದೆ. ಸದ್ಯ ಲಿಖಿತ ಉತ್ತರ, ಪ್ರಶ್ನೋತ್ತರ, ಮಸೂದೆಗಳು, ಕಲಾಪ ಚರ್ಚೆಗಳು, ಬಜೆಟ್ ಪ್ರತಿಗಳು ಆನ್‌ಲೈನ್ ಮೂಲಕ ಲಭ್ಯವಿದೆ. ಆದರೆ, ಸಂಪೂರ್ಣವಾಗಿ ಕಾಗದ ರಹಿತ ಸಾಧ್ಯವಾಗಿಲ್ಲ. ಪ್ರಸ್ತುತ ನಿಗಮ ಮಂಡಳಿಗಳ ವಾರ್ಷಿಕ ವರದಿ, ಆಡಿಟ್ ವರದಿ, ಕಾಗದ ಪತ್ರಗಳನ್ನು ಹಳೆಯ ಪದ್ಧತಿಯಾದ ಸಿಡಿಗಳ ಮೂಲಕ ಪ್ರತಿ ಶಾಸಕರ ಮನೆಗಳಿಗೆ ಕಳುಹಿಸಿಕೊಡಲಾಗುತ್ತಿದೆ. ಇದೀಗ ತಡವಾಗಿಯಾದರೂ ಸಂಪೂರ್ಣ ಕಾಗದ ರಹಿತ ಡಿಜಿಟಲ್ ಕಾರ್ಯಕಲಾಪಕ್ಕೆ ವಿಧಾನಮಂಡಲ ಅಣಿಯಾಗುತ್ತಿರುವುದು ಪ್ರಗತಿಶೀಲ ರಾಜ್ಯ ಕರ್ನಾಟಕಕ್ಕೆ ಶೋಭೆ ತಂದಿದೆ.್

## ಕಾನ್‌ಸ್ಟೇಬಲ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಉಮಾಮಹೇಶ್ವರಿ ಮನವಿ

ಸುಳ್ಳು ಆರೋಪ ಮಾಡಿ, ನನ್ನ ಮಗನ ಮೇಲೆ ಚಪ್ಪಲಿಯಿಂದ ಹೊಡೆದು, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಎಂದರು. ಹಲ್ಲೆ ಮಾಡಿದ ಶರಣ ಬಸವ ನಾಯಕ ಅವರು ಹಲ್ಲೆ ಮಾಡಿದ್ದಲ್ಲದೇ ನನ್ನ ಮಗ ಸೇರಿ 4 ಜನ ಯುವಕರ ಮೇಲೆ ಪ್ರಕರಣ ದಾಖಲಿಸಿದ್ದು, ಈ ಬಗ್ಗೆ ಡಿ.11ರಂದು ನಾವೂ ಕೂಡ ಲಿಂಗಸುಗೂರು ಠಾಣೆಗೆ ದೂರು ಸಲ್ಲಿಸಿದ್ದು, ಶರಣಬಸವ ನಾಯಕ ವಿರುದ್ಧ ಎಫ್‌ಐಆರ್ ಕೂಡ ದಾಖಲಾಗಿದೆ. ಆದರೆ ಈವರೆಗೂ ಶರಣಬಸವ ನಾಯಕ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ. ಈ ಬಗ್ಗೆ ಎಸ್‌ಪಿ ಅವರಿಗೂ ಮನವಿ ಸಲ್ಲಿಸಲಾಗಿದೆ. ಕೂಡಲೇ ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಯುವಕನ ತಂದೆ ಅಮರಯ್ಯ ಸ್ವಾಮಿ ಇದ್ದರು.

## ಕಾರವಾರ: ಮದ್ಯಕ್ಕೆ ಹಣ ನೀಡದ ಅಳಿಯನನ್ನೇ ಕೊಂದ ಮಾವನಿಗೆ ಜೀವಾವಧಿ ಶಿಕ್ಷೆ



**ಕಾರವಾರ,ಏ.3**-ಮದ್ಯ ಸೇವಿಸಲು ಹಣ ನೀಡಲಿಲ್ಲ ಹಾಗೂ ಮನೆಯಿಂದ ಹೊರಹಾಕಬೇಕು ಎಂಬ ಕ್ಷುಲ್ಲಕ ಕಾರಣಕ್ಕಾಗಿ ತನ್ನ ಸ್ವಂತ ಮನೆ ಅಳಿಯನನ್ನೇ ತಲೆಗೆ ಬಲವಾಗಿ ಹೊಡೆದು ಕೊಲೆ ಮಾಡಿದ ಆರೋಪಿಗೆ ಶಿರಸಿಯ ನ್ಯಾಯಾಲಯವು ಜೀವಾವಧಿ ಶಿಕ್ಷೆ ಹಾಗೂ 10,000 ರೂ. ದಂಡ ವಿಧಿಸಿ ತೀರ್ಪು ನೀಡಿದೆ.

ಶಿರಸಿ ತಾಲೂಕಿನ ಮಳಲಿಯಲ್ಲಿ ವಾಸವಿದ್ದ ವೆಂಕಟರಮಣ ಗಣಪ ಗೌಡ ಎಂಬಾತ ತನ್ನ ಮನೆ ಅಳಿಯನಾದ ಮಂಜುನಾಥ ರಾಮಾ ಗೌಡ (40 ವರ್ಷ) ಎಂಬಾತನನ್ನು ಮನೆಯಿಂದ ಓಡಿಸಬೇಕು ಎಂಬ ಉದ್ದೇಶ ಹೊಂದಿದ್ದನು. ಅಲ್ಲದೆ ತನಗೆ ಸಾರಾಯಿ ಕುಡಿಯಲು ಹಣ ಕೊಡುತ್ತಿಲ್ಲ ಎಂಬ ದ್ವೇಷದಿಂದ, ಕಳೆದ 2024ರ ಮೇ 2 ರಂದು ಮಧ್ಯಾಹ್ನ 1.10 ರಿಂದ 1.30 ರ ನಡುವಿನ ಅವಧಿಯಲ್ಲಿ ಮನೆಯವರು ಮದುವೆ ಕಾರ್ಯಕ್ರಮಕ್ಕೆ ಹೋಗಿದ್ದಾಗ ಈ ಕೃತ್ಯ ಎಸಗಿದ್ದಾನೆ. ಯಾರೂ ಇಲ್ಲದ ಸಮಯ ನೋಡಿ ಮಂಜುನಾಥ್ ಅವರ ತಲೆಗೆ ಕಟ್ಟಿಗೆಯ ಬಡಿಗೆಯಿಂದ ಬಲವಾಗಿ ಹೊಡೆದು ಸ್ಥಳದಲ್ಲೇ ಸಾಯುವಂತೆ ಮಾಡಿದ್ದನು. ಈ ಸಂಬಂಧ ಶಿರಸಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಐಪಿಸಿ ಕಲಂ 302 ರ ಅಡಿಯಲ್ಲಿ ಪ್ರಕರಣ ದಾಖಲಾಗಿತ್ತು.

ಈ ಪ್ರಕರಣದ ವಿಚಾರಣೆ ನಡೆಸಿದ ಕಾರವಾರದ (ಶಿರಸಿ ಪೀಠಾಸೀನ) 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಕಿರಣ ಕಿಣಿ ಅವರು, ಆರೋಪಿಯ ಮೇಲಿನ ಆರೋಪ ಸಾಬೀತಾಗಿದೆ ಎಂದು ತೀರ್ಪು ನೀಡಿದ್ದಾರೆ.

ಮೃತನ ಹೆಂಡತಿಗೆ 50 ಸಾವಿರ ರೂ ಪರಿಹಾರ: ಮೃತನ ಹೆಂಡತಿಗೆ 50,000 ಪರಿಹಾರ ನೀಡುವಂತೆ ಆದೇಶಿಸಲಾಗಿದೆ. ಅಲ್ಲದೆ ಹೆಚ್ಚಿನ ಪರಿಹಾರವನ್ನು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದಿಂದ ಪಡೆಯಬಹುದು ಎಂದು ತಿಳಿಸಲಾಗಿದೆ.

ಈ ಪ್ರಕರಣದಲ್ಲಿ ಸರ್ಕಾರದ ಪರವಾಗಿ ಪಬ್ಲಿಕ್ ಪ್ರಾಸಿಕ್ಯೂಟರ್ ಆದ ರಾಜೇಶ್ ಎಂ. ಮಳಗಿಕರ್ ಅವರು ವಾದ ಮಂಡಿಸಿದ್ದರು. ಶಿರಸಿ ಗ್ರಾಮೀಣ ಪೊಲೀಸ್ ಠಾಣೆಯ ವೃತ್ತ ಪೊಲೀಸ್ ನಿರೀಕ್ಷಕರಾದ ಸೀತಾರಾಮ ಅವರು ತನಿಖೆ ನಡೆಸಿ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು. ಸಾಕ್ಷಿ ವಿಚಾರಣೆ ಕಾಲಕ್ಕೆ ಸಾಕ್ಷಿದಾರರನ್ನು ಸಮಯೋಚಿತವಾಗಿ ಹಾಜರುಪಡಿಸಿ ಆರೋಪಿಗೆ ಶಿಕ್ಷೆಯಾಗುವಲ್ಲಿ ಸಹಕರಿಸಿದ ಹೆಡ್ ಕಾನ್ಸ್‌ಟೇಬಲ್ ಮಹೇಶ ನಾಯ್ಕ ಹಾಗೂ ಕಾನ್ಸ್‌ಟೇಬಲ್ ಶಂಕರಾಚಾರಿ ಎಸ್. ಅವರ ಕಾರ್ಯಕ್ಕೆ ಶ್ಲಾಘನೆ ವ್ಯಕ್ತವಾಗಿದೆ.ಪಿಗ್ಮಿ ಕಲೆಕ್ಟರ್ ಗೀತಾ ಪ್ರಭಾಕರ್ ಹುಂಡೇಕರ್ ಕೊಲೆ ಪ್ರಕರಣ: ಸಿದ್ದಾಪುರದ ವಿನಾಯಕ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ ಪಿಗ್ಮಿ ಕಲೆಕ್ಟರ್ ಗೀತಾ ಪ್ರಭಾಕರ್ ಹುಂಡೇಕರ್ ಅವರ ಭೀಕರ ಕೊಲೆ ಪ್ರಕರಣದ ತಪ್ಪಿತಸ್ಥನಿಗೆ ಜೀವಾವಧಿ ಶಿಕ್ಷೆ ಹಾಗೂ ದಂಡ ವಿಧಿಸಿ ಶಿರಸಿಯ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ಫೆಬ್ರವರಿಯಲ್ಲಿ ಮಹತ್ವದ ತೀರ್ಪು ನೀಡಿತ್ತು.

## ಚಿಕ್ಕಬಳ್ಳಾಪುರದಲ್ಲಿ ಭೀಕರ ರಸ್ತೆ ಅಪಘಾತ ನವವಿವಾಹಿತೆ ಸಾವು, ಪತಿ ಗಂಭೀರ



**ಚಿಕ್ಕಬಳ್ಳಾಪುರ,ಏ.3**-ಮುಂದೆ ಹೋಗುತ್ತಿದ್ದ ಕಂಟೈನರ್ ಲಾರಿಗೆ ಹಿಂಬದಿಯಿಂದ ಕಾರು ಡಿಕ್ಕಿ ಹೊಡೆದಿದೆ. ಪರಿಣಾಮ ಇಬ್ಬರು ಮೃತಪಟ್ಟು, ಓರ್ವ ಗಂಭೀರವಾಗಿ ಗಾಯಗೊಂಡಿರುವ ಘಟನೆ ಚಿಕ್ಕಬಳ್ಳಾಪುರ ತಾಲೂಕಿನ ಬೆಂಗಳೂರು ಹೈದರಾಬಾದ್ ರಾಷ್ಟ್ರೀಯ ಹೆದ್ದಾರಿಯ ಶೆಟ್ಟಿಗೆರೆ ಕ್ರಾಸ್ ಬಳಿ ಇಂದು ನಡೆದಿದೆ.

ರಕ್ಷಿತಾ ರೆಡ್ಡಿ (23), ಪವನ್ ರೆಡ್ಡಿ (30) ಮೃತಪಟ್ಟವರು. ರಾಜಶೇಖರ್ ರೆಡ್ಡಿ ಗಂಭೀರವಾಗಿ ಗಾಯಗೊಂಡಿದ್ದು, ಚಿಕಿತ್ಸೆಗಾಗಿ ಬೆಂಗಳೂರಿನ ಆಸ್ಪತ್ರೆಗೆ ಕಳುಹಿಸಲಾಗಿದೆ.

5 ತಿಂಗಳ ಹಿಂದೆಯಷ್ಟೇ ಮದುವೆ: ಬಳ್ಳಾರಿ ತಾಲೂಕಿನ ಜೋಳದ ರಾಶಿ ಗ್ರಾಮದ ರಾಜಶೇಖರ್ ರೆಡ್ಡಿ ಮತ್ತು ರಕ್ಷಿತಾ ರೆಡ್ಡಿ (23) ಕಳೆದ 5 ತಿಂಗಳ ಹಿಂದೆಯಷ್ಟೇ ಮದುವೆಯಾಗಿದ್ದರು. ಇದೀಗ ಅಪಘಾತದಲ್ಲಿ ಪತ್ನಿ ಕೊನೆಯುಸಿರೆಳೆದಿದ್ದು, ಪತಿ ಗಂಭೀರವಾಗಿ ಗಾಯಗೊಂಡಿದ್ದಾರೆ.

ಬೆಂಗಳೂರಿನಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿರುವ ರಾಜಶೇಖರ್ ರೆಡ್ಡಿ, ನವೆಂಬರ್ ತಿಂಗಳಲ್ಲಿ ರಕ್ಷಿತಾ ರೆಡ್ಡಿಯನ್ನ ಮದುವೆಯಾಗಿದ್ದರು. ಇಬ್ಬರೂ ಬೆಂಗಳೂರಿನಲ್ಲಿ ವಾಸವಾಗಿದ್ದರು. ಸ್ನೇಹಿತ ಪವನ್ ರೆಡ್ಡಿ ಜೊತೆ ದಂಪತಿ ಹಿಂದೂಪುರದ ಅವಳಗಿ ಗ್ರಾಮಕ್ಕೆ ಹೋಗುತ್ತಿದ್ದ ವೇಳೆ ಅವಘಡ ಸಂಭವಿಸಿದೆ.

ಮುಂದೆ ಹೋಗುತ್ತಿದ್ದ ಕಂಟೈನರ್ ಲಾರಿಗೆ ಹಿಂಬದಿಯಿಂದ ಕಾರು ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ರಭಸಕ್ಕೆ ಕಾರಿನ ಮುಂಭಾಗ ಸಂಪೂರ್ಣ ಜಖಂ ಆಗಿದೆ. ಪೆರೇಸಂದ್ರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಾತ್ರೆಗೆಂದು ಸಂಭ್ರಮದಿಂದ ಊರಿಗೆ ಬರಬೇಕಾಗಿದ್ದ ನವಜೋಡಿಗೆ ಅಪಘಾತವಾಗಿದ್ದು, ಕುಟುಂಬಸ್ಥರ ಆಕ್ರಂದನಕ್ಕೆ ಕಾರಣವಾಗಿದೆ. ಜೋಳದ ರಾಶಿ ಗ್ರಾಮಕ್ಕೆ ಮೃತದೇಹ ಆಗಮಿಸುತ್ತಿದ್ದಂತೆ ಕುಟುಂಬಸ್ಥರು, ಸಂಬಂಧಿಕರ ರೋಧನ ಮುಗಿಲು ಮುಟ್ಟಿದ್ದು, ಗ್ರಾಮದಲ್ಲಿ ಶೋಕದ ವಾತಾವರಣ ನಿರ್ಮಾಣವಾಗಿದೆ.

## ಮೈಸೂರು ಜಿಲ್ಲಾಧಿಕಾರಿಗಳ ಬಂಧನಕ್ಕೆ ವಾರಂಟ್ ಜಾರಿ ಮಾಡಿದ ಕೋರ್ಟ್

**ಮೈಸೂರು,ಏ.3**-ಭೂ ವ್ಯಾಜ್ಯದ ಸಂಬಂಧ ಮೈಸೂರಿನ ಒಂದನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ನ್ಯಾಯಾಲಯದಿಂದ ಹೊರಡಿಸಿದ್ದ ಆದೇಶವನ್ನು ಪಾಲನೆ ಮಾಡದ ಹಿನ್ನೆಲೆಯಲ್ಲಿ ಮೈಸೂರಿನ ಜಿಲ್ಲಾಧಿಕಾರಿಗಳ ಬಂಧನಕ್ಕೆ ವಾರಂಟ್ ಜಾರಿ ಮಾಡಲಾಗಿದೆ.ಜಿಲ್ಲಾಡಳಿತ ಸ್ವಾಧೀನ ಪಡಿಸಿಕೊಂಡಿದ್ದ ಕುಂಬಾರ ಕೊಪ್ಪಲಿನ ನಿವಾಸಿ ಜಯರಾಮು ಅವರ ಜಮೀನು ಸಂಬಂಧ ಕೋರ್ಟ್ ಆದೇಶ ಮಾಡಿತ್ತು. ಈ ಆದೇಶವನ್ನು ಜಿಲ್ಲಾಧಿಕಾರಿಗಳು ಪಾಲನೆ ಮಾಡಿಲ್ಲ ಎಂದು ಜಯರಾಮು ಅವರು ಮತ್ತೆ ಕೋರ್ಟ್ ಮೊರೆ ಹೋಗಿದ್ದರು. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ನ್ಯಾಯಾಧೀಶರು, ಡಿಸಿ ಅವರ ಬಂಧನಕ್ಕೆ ವಾರಂಟ್ ಜಾರಿ ಮಾಡಿದ್ದಾರೆ. ಏನಿದು ಪ್ರಕರಣ? ನಗರದ ಕುಂಬಾರ ಕೊಪ್ಪಲಿನ ಸೀತಾರಾಮೇಗೌಡ ಅವರಿಗೆ ಸೇರಿದ್ದ ಹೆಬ್ಬಾಳು ಗ್ರಾಮದ ಸರ್ವೇ ನಂ.155, 159/1 ವ್ಯಾಪ್ತಿಯಲ್ಲಿ ಐದು ಎಕರೆ ಪ್ರದೇಶವನ್ನು 1980 ಸಮಯದಲ್ಲಿ ನಗರ ಭೂಮಿತಿ ಕಾಯಿದೆಯಡಿ ಜಿಲ್ಲಾಡಳಿತ ಸ್ವಾಧೀನ ಪಡಿಸಿಕೊಂಡಿತ್ತು.

## ಬೆಳಗಾವಿ ಡಿಸಿಸಿ ಬ್ಯಾಂಕಿಗೆ ಈ ವರ್ಷ 56.25 ಕೋಟಿ ಲಾಭ: ಅಧ್ಯಕ್ಷ ಅಣ್ಣಾಸಾಹೇಬ ಜೊಲ್ಲೆ



**ಬೆಳಗಾವಿ,ಏ.3**-ಬೆಳಗಾವಿ ಡಿಸಿಸಿ ಬ್ಯಾಂಕ್ 2025 - 26ನೇ ಸಾಲಿನಲ್ಲಿ 6703.36 ಕೋಟಿ ರೂ. ಠೇವು ಸಂಗ್ರಹಿಸಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ 616.30 ಕೋಟಿ ರೂ.ಗೂ ಹೆಚ್ಚು ಠೇವು ಸಂಗ್ರಹವಾಗಿದೆ. ಅದೇರೀತಿ 56.25 ಕೋಟಿ ರೂ. ಲಾಭ ಗಳಿಸಿದೆ ಎಂದು ಬ್ಯಾಂಕಿನ ಅಧ್ಯಕ್ಷ ಅಣ್ಣಾಸಾಹೇಬ ಜೊಲ್ಲೆ ಹೇಳಿದ್ದಾರೆ.

ಬೆಳಗಾವಿ ಡಿಸಿಸಿ ಬ್ಯಾಂಕಿನಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಈ ವರ್ಷದಲ್ಲಿ ಜಿಲ್ಲೆಯ 4,77,464 ಜನ ರೈತರಿಗೆ 3818.79 ಕೋಟಿ ಶೂನ್ಯ ಬಡ್ಡಿ ದರದಲ್ಲಿ ಬೆಳೆಸಾಲ ವಿತರಿಸಲಾಗಿದೆ. ಜಿಲ್ಲೆಯ ಒಟ್ಟು 444 ಜನ ರೈತರಿಗೆ 24.54 ಕೋಟಿ ರೂ. ಟ್ರ್ಯಾಕ್ಟರ್ ಸಾಲ ಹಾಗೂ ಪೈಪಲೈನ್ ಸಾಲ ವಿತರಿಸಲಾಗಿದೆ. 165 ಸಂಘಗಳಿಗೆ 22.89 ಕೋಟಿ ರೂ. ಗೋಡೌನ್ ಸಾಲ ವಿತರಿಸಲಾಗಿದೆ ಎಂದರು.

ಜಿಲ್ಲೆಯ ರೈತರು ಹಾಗೂ ಗ್ರಾಹಕರು ನಮ್ಮ ಮೇಲೆ ವಿಶ್ವಾಸವಿಟ್ಟು ಹೆಚ್ಚಿನ ಪ್ರಮಾಣದಲ್ಲಿ ಠೇವು ಇಟ್ಟಿದ್ದಾರೆ. ಕಳೆದ ವರ್ಷಕ್ಕಿಂತಲೂ ಈ ಬಾರಿ ಹೆಚ್ಚಿನ ಪ್ರಮಾಣದಲ್ಲಿ ಠೇವು ಬ್ಯಾಂಕಿಗೆ ಬಂದಿದೆ. ನಮ್ಮ ಆಡಳಿತವನ್ನು ಒಪ್ಪಿಕೊಂಡು ಗ್ರಾಹಕರು ವಿಶ್ವಾಸದಿಂದ ವ್ಯವಹಾರ ನಡೆಸುತ್ತಿದ್ದಾರೆ. ಯಾವುದೇ ಊಹಾಪೋಹಗಳಿಗೆ ಕಿವಿಗೊಡದೇ ಬ್ಯಾಂಕಿನೊಂದಿಗೆ ಉತ್ತಮ ಸಂಬಂಧ ಇಟ್ಟುಕೊಂಡಿದ್ದಾರೆ. ಹಾಗಾಗಿ, ಈ ವರ್ಷ ಬ್ಯಾಂಕ್ 56.25 ಕೋಟಿ ರೂ. ಲಾಭ ಗಳಿಸಿದೆ ಎಂದು ಅಣ್ಣಾಸಾಹೇಬ ಜೊಲ್ಲೆ ಹೇಳಿದರು.

2025-26ನೇ ಸಾಲಿನ ಪ್ರಸಕ್ತ ಸಾಲಿನಲ್ಲಿ 8 ನೂತನ ಶಾಖೆಗಳನ್ನು ಪ್ರಾರಂಭಿಸಿದ್ದು, ಒಟ್ಟು 112 ಶಾಖೆಗಳು ಕೋರ್ ಬ್ಯಾಂಕಿಂಗ್ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿವೆ. ರಾಜ್ಯದಲ್ಲಿಯೇ ಪ್ರಪ್ರಥಮ ಜಿಲ್ಲೆಯ ಎಲ್ಲ ವಿವಿದೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರಿ ಸಂಘಗಳ ಸಿಬ್ಬಂದಿಗಳಿಗೆ ಒಂದು ಲಕ್ಷ ರೂ. ಆರೋಗ್ಯ ವಿಮೆ, 5 ಲಕ್ಷ ರೂ. ಜೀವವಿಮೆ, 10 ಲಕ್ಷ ರೂ. ಅಪಘಾತ ವಿಮೆ ಸೌಲಭ್ಯವನ್ನು ಒದಗಿಸಲಾಗಿದೆ ಎಂದರು.

ಶೀಘ್ರ ಎಲ್ಲ ಶಾಖೆಗಳಲ್ಲೂ ಎಟಿಎಂ: ಬ್ಯಾಂಕಿನ ಡಿಜಿಟಲೀಕರಣಕ್ಕೆ ಸಂಬಂಧಿಸಿದಂತೆ ಗ್ರಾಹಕರಿಗೆ ತ್ವರಿತ ವ್ಯವಹಾರಕ್ಕಾಗಿ ಐಖಕಖ ಸೌಲಭ್ಯ ಕಲ್ಪಿಸಲಾಗಿದೆ. ಶೀಘ್ರದಲ್ಲಿ ಖಿಕಐ ಸೇವೆ ಆರಂಭವಾಗಲಿದೆ. ಪ್ರಧಾನ ಕಚೇರಿಯಲ್ಲಿ ಎಟಿಎಂ ಮಷಿನ್ ಸೌಲಭ್ಯ ಇದೆ. ಮುಂದಿನ ದಿನಗಳಲ್ಲಿ ಪ್ರತಿಯೊಂದು ತಾಲೂಕು ಹಾಗೂ ಶಾಖೆಗಳಲ್ಲಿ ಎಟಿಎಂ ಯಂತ್ರ ಅಳವಡಿಸಲಾಗುವುದು. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಹಾಗೂ ನಬಾರ್ಡ್ ಬ್ಯಾಂಕ್ ಮಾರ್ಗಸೂಚಿಗಳಿಗನುಗುಣವಾಗಿ ಸೈಬರ್ ಸುರಕ್ಷತಾ ಪ್ರೇಮ್ ವರ್ಕ್ ಬ್ಯಾಂಕಿನಲ್ಲಿ ಜಾರಿಗೆ ತರಲಾಗುತ್ತಿದೆ ಎಂದು ಅಣ್ಣಾಸಾಹೇಬ ಜೊಲ್ಲೆ ತಿಳಿಸಿದರು.

ಜಿಲ್ಲೆಯ 3,64,204 ಜನ ರೈತ ಸದಸ್ಯರನ್ನು 2026-27ನೇ ಸಾಲಿನಲ್ಲಿ ಯಶಸ್ವಿನಿ ಯೋಜನೆಯಲ್ಲಿ ಅಳವಡಿಸಲಾಗಿದೆ. ಪಿಕೆಪಿಎಸ್ ಸಂಘ ಗ್ರಾಮೀಣ ನಾಲ್ವರು ಸದಸ್ಯರ ಕುಟುಂಬಕ್ಕೆ 500 ರೂ. ವಂತಿಗೆ ಹಾಗೂ 4ಕ್ಕಿಂತ ಹೆಚ್ಚು ಪ್ರತಿ ಸದಸ್ಯರಿಗೆ 100 ಪಾವತಿಸುವುದು. ಎಸ್ ಸಿ, ಎಸ್ ಟಿ ಸದಸ್ಯರಿಗೆ ಉಚಿತವಿದೆ. ಗರಿಷ್ಠ ನಾಲ್ಕು ಸದಸ್ಯರ ಕುಟುಂಬಕ್ಕೆ ಒಂದು ಸಾವಿರ ರೂ. ವಂತಿಗೆ ಹಾಗೂ 4ಕ್ಕಿಂತ ಹೆಚ್ಚು ಪ್ರತಿ ಸದಸ್ಯರಿಗೆ 200 ರೂ. ವಂತಿಗೆ ಪಾವತಿಸಲಾಗುವುದು ಎಂದರು.

ಜಿಲ್ಲೆಯ 918 ಸ್ವ ಸಹಾಯ ಗುಂಪುಗಳಿಗೆ 36.18 ಕೋಟಿ ರೂ. ಸಾಲ ವಿತರಿಸಲಾಗಿದೆ. 5 ಲಕ್ಷ ರೂ. ವರೆಗೆ ಶೂನ್ಯ ಬಡ್ಡಿ ದರ, 5 ಲಕ್ಷ ರೂ. ದಿಂದ 10 ಲಕ್ಷ ರೂ. ವರೆಗೆ ಶೇ. 4ರಷ್ಟು ಬಡ್ಡಿ ದರ ಇದೆ. ಕೃಷಿಯೇತರ ಸಾಲಗಳಾದ ದ್ವಿಚಕ್ರ ವಾಹನ, ಕಾರು, ಜೆ.ಸಿ.ಬಿ, ಟ್ರಕ್, ವಾಣಿಜ್ಯ ಬಾಡಿಗೆ ವಾಹನ, ಹೌಸಿಂಗ್ ಸಾಲ, ಮಾರ್ಟಗೇಜ್ ಸಾಲ, ವೈಯಕ್ತಿಕ ಸಾಲಗಳನ್ನು 160.28 ಕೋಟಿ ರೂ. ವಿತರಿಸಲಾಗಿದೆ. 173.36 ಕೋಟಿ ರೂ. ಬಂಗಾರ ಅಡುವಿನ ಸಾಲ ವಿತರಿಸಲಾಗಿದೆ ಎಂದು ಹೇಳಿದರು.

ಜಿಲ್ಲೆಯ ರೈತರು ಹಾಗೂ ಗ್ರಾಹಕರು ನಮ್ಮ ಮೇಲೆ ವಿಶ್ವಾಸವಿಟ್ಟು ಹೆಚ್ಚಿನ ಪ್ರಮಾಣದಲ್ಲಿ ಠೇವು ಇಟ್ಟಿದ್ದಾರೆ. ಕಳೆದ ವರ್ಷಕ್ಕಿಂತಲೂ ಈ ಬಾರಿ ಹೆಚ್ಚಿನ ಪ್ರಮಾಣದಲ್ಲಿ ಠೇವು ಬ್ಯಾಂಕಿಗೆ ಬಂದಿದೆ. ನಮ್ಮ ಆಡಳಿತವನ್ನು ಒಪ್ಪಿಕೊಂಡು ಗ್ರಾಹಕರು ವಿಶ್ವಾಸದಿಂದ ವ್ಯಹಾರ ನಡೆಸುತ್ತಿದ್ದಾರೆ. ಯಾವುದೇ ಊಹಾಪೋಹಗಳಿಗೆ ಕಿವಿಗೊಡದೇ ಬ್ಯಾಂಕಿನೊಂದಿಗೆ ಉತ್ತಮ ಸಂಬಂಧ ಇಟ್ಟುಕೊಂಡಿದ್ದಾರೆ. ಹಾಗಾಗಿ, ಈ ವರ್ಷ ಬ್ಯಾಂಕ್ 56.25 ಕೋಟಿ ರೂ. ಲಾಭ ಗಳಿಸಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಬೆಮುಲ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ, ಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಅಪ್ಪಾಸಾಹೇಬ ಕುಲಗೋಡೆ, ವಿರೂಪಾಕ್ಷ ಮಾಮನಿ,್ ನಾನಾಸಾಹೇಬ ಪಾಟೀಲ, ನೀಲಕಂಠ ಕಪ್ಪಲಗುದ್ದಿ, ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಎನ್.ಜಿ. ಕಲಾವಂತ ಸೇರಿ ಮತ್ತಿತರರು ಇದ್ದರ್.

## ದಾಖಲೆ ಪ್ರಮಾಣದಲ್ಲಿ ಟ್ಯಾಕ್ಸ್ ಸಂಗ್ರಹ, ಮಸ್ಕಿ ತಾಲೂಕ ಪ್ರಥಮ

ಕರವಸೂಲಿಗಾರರು,ನೀರು ಗಂಟಿ,ಗ್ರಂಥ ಪಾಲಕರು ಸೇರಿ ವಿವಿಧ ಸಿಬ್ಬಂದಿ ವೇತನ,ಇನ್ನಿತರ ಕಚೇರಿ ಖರ್ಚಿಗಾಗಿ ಗ್ರಾಮ ಪಂಚಾಯತಿಗಳು ತೆರಿಗೆ ವಸೂಲಾತಿಯಿಂದ ಸಂಗ್ರಹವಾಗುವ ಹಣವನ್ನು ಆಶ್ರಯಿಸಿವೆ.ಹೀಗಾಗಿ ಗ್ರಾಪಂಗಳ ಸುಗಮ ಆಡಳಿತಕ್ಕಾಗಿ ತೆರಿಗೆ ವಸೂಲಾತಿ ನಿರ್ಣಾಯಕವಾಗಲಿದೆ.ಹೀಗಾಗಿ ಮಸ್ಕಿ ತಾಲೂಕಿನ 21 ಗ್ರಾಮ ಪಂಚಾಯತಿಗಳಲ್ಲಿ ಕೈಗೊಂಡ ನಿರಂತರ ಅಭಿಯಾ ನದ ಪರಿಣಾಮವಾಗಿ ತೆರಿಗೆ ವಸೂಲಾತಿಯಲ್ಲಿ ಮೇಲುಗೈ ಸಾಧಿಸಿದೆ.

ರಾಯಚೂರು ಜಿ.ಪಂಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ ಅವರ ನಿರ್ದೇಶನದಂತೆ ಪ್ರತಿ ಗುರುವಾರ ತೆರಿಗೆ ವಸೂಲಾತಿ ಅಭಿಯಾನ ಕೈಗೊಳ್ಳಲಾಗಿತ್ತು.ಮಸ್ಕಿ ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳಾದ ಅಮರೇಶ ಯಾದವ್,ಸಹಾಯಕ ನಿರ್ದೇಶಕರಾದ (ಪಂ.ರಾ) ಸೋಮನಗೌಡ ಪಾಟೀಲ್ ಅವರು ನಿರಂತರವಾಗಿ ನಿಗಾ ವಹಿಸಿ,ಪ್ರತಿ ನಿತ್ಯ ವಿಸಿ ಮೂಲಕ ಸಭೆ ಕರೆದು,ವಿಚಾರಿಸಿದ ಪರಿಣಾಮವಾಗಿ ತೆರಿಗೆ ವಸೂಲಾತಿಯಲ್ಲಿ ಮಸ್ಕಿ ತಾಪಂ ಮೇಲುಗೈ ಸಾಧಿಸಿದೆ.ಅದರಲ್ಲೂ ಮಾರ್ಚ್ ತಿಂಗಳು ಸಂಪೂರ್ಣ ತೆರಿಗೆ ವಸೂಲಾತಿಗೆ ಆದ್ಯತೆ ನೀಡಿದ ಪರಿಣಾಮ ತೃಪ್ತಿಕರ ಫಲಿತಾಂಶ ದೊರೆತಿದ್.ತೆರಿಗೆ ಪಾವತಿಸುವಂತೆ ಸ್ಥಳೀಯರ ಮನವೊಲಿಸುವ ನಿಟ್ಟಿನಲ್ಲಿ ಗ್ರಾಮ ಪಂಚಾಯತಿ ಮುಂಭಾಗ,ಇನ್ನಿತರ ಸಾರ್ವಜನಿಕ ಸ್ಥಳಗಳಲ್ಲಿ ಬ್ಯಾನರ್ ಅಳವಡಿಸಿ,ಕಸ ವಿಲೇವಾರಿ ವಾಹನ,ದೇವಸ್ಥಾನದ ಮೈಕ್ ಗಳಲ್ಲಿ ವ್ಯಾಪಕ ಪ್ರಚಾರ ಕೈಗೊಂಡಿದ್ದರಿಂದ ಗಮನಾರ್ಹವಾಗಿ ತೆರಿಗೆ ವಸೂಲಾತಿಯಾಗಿದೆ. ಆಯಾ ಗ್ರಾ.ಪಂ ಪಿಡಿಒಗಳ ನೇತೃತ್ವದಲ್ಲಿ ಗ್ರಾಪಂ ಕಾರ್ಯದರ್ಶಿಗಳು,ದ್ವಿತೀಯ ದರ್ಜೆ ಲೆಕ್ಕ ಸಹಾಯಕರು,ಕರವಸೂಲಿಗಾರರು, ಕಂಪ್ಯೂಟರ್ ನಿರ್ವಾಹಕರು,ನೀರು ಗಂಟಿಗಳು,ಬಿಎಫ್ಟಿ,ಜಿಕೆಎಂ ಸೇರಿ ಎಲ್ಲಾ ಗ್ರಾಪಂ ಸಿಬ್ಬಂದಿ ಮನೆ ಮನೆಗೆ ತೆರಳಿ ಕರ ವಸೂಲಿಗೆ ಕೈಜೋಡಿಸಿದ್ದಾರೆ.

## ವಿದ್ಯಾಧಾತೆ ಪ್ರಶಸ್ತಿ ಪ್ರದಾನ ಏ.5ಕ್ಕೆ-ಮಹಾಂತೇಶ ಬಿರಾದಾರ

ವಿದ್ಯಾಧಾತೆ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ನಗರ ಸಾಕ ಡಾ.ಶಿವರಾಜ ಪಾಟೀಲ್, ಗ್ರಾಮೀಣ ಶಾಸಕ ಬಸನಗೌಡ ದದ್ದಲ್ ಚಾಲನೆ ನೀಡಲಿದ್ದು, ಪ್ರಶಸ್ತಿಯನ್ನು ಎಂಎಲ್‌ಸಿಗಲಾದ ಎ.ವಸಂತಕುಮಾರ, ಶರಣಗೌಡ ಬಯ್ಯಾಪೂರ, ಶಾಸಕಿ ಜಿ.ಕರೆಮ್ಮ ನಾಯಕ ಸೇರಿ ಅಧಿಕಾರಿಗಳು ಪ್ರದಾನ ಮಾಡಲಿದ್ದಾರೆ ಎಂದ ತಿಳಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ಉಪನ್ಯಾಸಕ ಸುಖದೇವ, ಶಿಕ್ಷಕಿಯರಾದ ಸಬಿಹಾ ನಿಖತ್ ಹಾಗೂ ಮಹಾಲಕ್ಷ್ಮೀ ಅವರಿಗೆ ವಿಶೇಷ ಪ್ರಶಸ್ತಿಯನ್ನು ನೀಡಲಾಗುತ್ತದೆ. ಉಳಿದ ಜಿಲ್ಲೆ ಮತ್ತು ತಾಲೂಕಿನ ಶಿಕ್ಷಕಿಯರಿಗೆ ವಿದ್ಯಾಧಾತೆ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುವುದು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಪ್ರತಿಭಾ ಗೋನಾಳ, ಪ್ರಮುಖರಾದ ನಂದೀಶ, ಸಂತೋಷ ನಂದಿನಿ, ಧನಲಕ್ಷ್ಮೀ, ರಾಘವೇಂದ್ರ, ರಾಜಶೇಖರ ಸೇರಿ ಅನೇಕರಿದ್ದರು.

## ಕೇಂದ್ರದಿಂದ ಜಿಎಸ್‌ಟಿಯಿಂದ 10 ಸಾವಿರ ಕೋಟಿ ರೂ. ಬರಬೇಕೆಂದು ಸಿಎಂ ಹೇಳಿರುವುದು ಸುಳ್ಳು: ಬಸವರಾಜ ಬೊಮ್ಮಾಯಿ

**ಬೆಂಗಳೂರು,ಏ.3**-ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರದಿಂದ 10 ಸಾವಿರ ಕೋಟಿ ರೂ. ಜಿಎಸ್‌ಟಿಯಿಂದ ಬರಬೇಕು ಎಂದು ಹೇಳಿರುವುದು ಸುಳ್ಳು ಎಂದು ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ತಿರುಗೇಟು ನೀಡಿದ್ದಾರೆ.

ಸಿಎಂ ಸಿದ್ದರಾಮಯ್ಯ ದಾವಣಗೆರೆಯಲ್ಲಿ ಮಾತನಾಡಿ ಬಿಜೆಪಿ ವಿರುದ್ಧ ಮಾಡಿರುವ ಆರೋಪಕ್ಕೆ ಬೆಂಗಳೂರಿನಲ್ಲಿ ತಿರುಗೇಟು ನೀಡಿರುವ ಅವರು, ಪ್ರತಿ ತಿಂಗಳು ಜಿಎಸ್‌ಟಿಯಿಂದ ರಾಜ್ಯಕ್ಕೆ ಬರುವುದು ಬರುತ್ತದೆ. ಕಾಂಗ್ರೆಸ್ ಜಿಎಸ್‌ಟಿ ಕಡಿಮೆ ಮಾಡಿರುವುದನ್ನು ಒಪ್ಪಿ ಜನರ ಪರ ಇದೆಯಾ ಅಥವಾ ಹೆಚ್ಚಿನ ದರದ ಪರ ಇದ್ದಾರಾ? ಎನ್ನುವುದನ್ನು ತಿಳಿಸಬೇಕು. ಎಸ್ - ಜಿಎಸ್‌ಟಿಯಿಂದ ಶೇ. 50ರಷ್ಟು, ಸಿ - ಜಿಎಸ್‌ಟಿಯಿಂದ ಶೇ. 40ರಷ್ಟು ಬರುತ್ತದೆ. 10 ಸಾವಿರ ಕೋಟಿ ಯಾವ ಬಾಬತ್ತಿನಲ್ಲಿ ಉಳಿದಿದೆ ಎಂಬ ವಿವರವನ್ನು ಸಿಎಂ ಸಿದ್ದರಾಮಯ್ಯ ಕೊಡಬೇಕು. ಸಿಎಂ ಮಾಹಿತಿ ನೀಡಿದರೆ ನ್ಯಾಯ ಸಮ್ಮತವಾಗಿ ರಾಜ್ಯಕ್ಕೆ ಬರುವ ಜಿಎಸ್‌ಟಿ ಹಣವನ್ನು ಪಡೆಯಲು ನಮ್ಮ ಪ್ರಯತ್ನ ಮಾಡುತ್ತೇವೆ ಎಂದು ತಿಳಿಸಿದ್ದಾರೆ.

ಜಿಎಸ್‌ಟಿ ದರ ಇಳಿಕೆ ಮಾಡಿರುವುದರಲ್ಲಿ ಹಣ ಬರಬೇಕೆನ್ನುವುದು ಕಾಂಗ್ರೆಸ್ ನಿಲುವು ಇದ್ದರೆ, ವಸ್ತುಗಳ ಮೇಲಿನ ದರ ಕಡಿಮೆ ಮಾಡಬೇಕೆನ್ನುವುದು ಪ್ರಧಾನಿ ನರೇಂದ್ರ ಮೋದಿ ಸರ್ಕಾರದ ನಿಲುವು. ಅದನ್ನು ಒಪ್ಪಿ ಕಾಂಗ್ರೆಸ್ ಜನರ ಪರ ಇದೆಯಾ ಅಥವಾ ಹೆಚ್ಚಿನ ದರದ ಪರ ಇದ್ದಾರಾ? ಎನ್ನುವುದನ್ನು ತಿಳಿಸಬೇಕು ಎಂದು ಬೊಮ್ಮಾಯಿ ಆಗ್ರಹಿಸಿದ್ದಾರೆ.

ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಕೇಂದ್ರ ಸರ್ಕಾರ ಕೆಲವು ವಸ್ತುಗಳ ಮೇಲಿನ ಜಿಎಸ್‌ಟಿ ದರವನ್ನು ಶೇ. 18 ರಿಂದ 5ಕ್ಕೆ ಮತ್ತು ಶೇ. 5 ರಿಂದ ಶೂನ್ಯಕ್ಕೆ ಇಳಿಸಿರುವುದನ್ನು ಮರೆತಿದ್ದಾರೆ. ಇದೆಲ್ಲ ಚುನಾವಣೆಯ ಸ್ಟಂಟ್.

ರಾಜ್ಯದಲ್ಲಿ ಸಿಎಂ ಸಿದ್ದರಾಮಯ್ಯ ಅವರು 2013 ರಿಂದ 2018 ರವರೆಗೆ ಮತ್ತು ಈಗಿನ ಅವಧಿಯಲ್ಲಿ ಒಟ್ಟು 5 ಲಕ್ಷ 55 ಸಾವಿರ ಕೋಟಿ ಸಾಲ ಮಾಡಿದ್ದು, ಅದು ಬಿಜೆಪಿಯದ್ದಲ್ಲ ಎಂದು ಸ್ಪಷ್ಟಪಡಿಸಿದರು.

OWNER, PUBLISHER, PRINTER BY: SHYAM SUNDER L. PUBLISHED FROM: H: NO: 5-3-6, HANUMAN TALKIES ROAD, OPP VAIKUNTAM TEMPLE, NETAJI NAGAR, RAICHUR-584101, DIST: RAICHUR, KARNATAKA AND PRINTED AT: KANNADA MATHRUBHOOMI PRINTERS, SHOP NO: 5-3-6, HANUMAN TALKIES ROAD, OPP VAIKUNTAM TEMPLE, NETAJI NAGAR, RAICHUR-584101, DIST: RAICHUR, KARNATAKA, EDITOR BY: SHYAM SUNDER L